CC-O. In Public Domain. Digitized by eGangotri

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಂ
ಸುಂಟಿಕೊಪ್ಪಸ್ಥಂ ಶ್ರೀ ರಾಮಂ ವಂದೇತಂ ಲಕ್ಷ್ಮಣಾಗ್ರಜಂ

ಶ್ರೀ ರಾಮಾಯಣ ಕಥಾ ಸಂಗ್ರಹ



ಕವಿ ಗಣೇಶ ಶರ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಿಕರ್ತೃವಿನ ಎರಡು ಮಾತು

ಭರತಖಂಡದ ನಮ್ಮಗಳಿಗೆ ರಾಮಾಯಣ ಮಹಾಭಾರತ ಪವಿತ್ರಗ್ರಂಥಗಳು. ರಾಮಾಯಣ ಮಹಾಭಾರತದ ಕಥೆಗಳನ್ನು ತಿಳಿಯದೆ ಇರುವವರು ವಿರಳ. ಈ ಕಥೆಗಳಿಂದ ನಮ್ಮ ಹಿರಿಯರ ಜೀವನ ಪದ್ಧತಿ ಹೇಗಿತ್ತೆಂದು ತಿಳಿಯಬಹುದು ಮತ್ತು ನಮ್ಮ ಹಿರಿಯರು ಸತ್ಯಧರ್ಮ ನಿಯತ್ತು ಇವುಗಳನ್ನು ತಮ್ಮ ಜೀವನದಲ್ಲಿ ಹೇಗೆ ಅಳವಡಿಸಿಕೊಂಡಿದ್ದರು ಮತ್ತು ಗುರುಹಿರಿಯರಿಗೆ ಹೇಗೆ ಗೌರವ ಕೊಡುತ್ತಿದ್ದರು ಎಂಬುದನ್ನು ತಿಳಿಯಬಹುದು.

ಕನ್ನಡ ಮಹಾಭಾರತದ ಕರ್ತೃ ಗದುಗಿನ ನಾರಾಯಣಪ್ಪ ನವರು ಹೇಳಿದಂತೆ ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲ್ಲಿ ಎಂಬಂತೆ ಬಹಳಷ್ಟು ಕವಿಗಳು ಬಹಳಷ್ಟು ಭಾಷೆಗಳಲ್ಲಿ ಮತ್ತು ವಚನಕಾರರು ವಚನರೂಪದಲ್ಲಿ ರಾಮಾಯಣವನ್ನು ಬರೆದಿದ್ದಾರೆ. ನಾನೂ ಕೂಡ ನನ್ನ ಅಮ್ಮ ಲಕ್ಷ್ಮಮ್ಮ ಅವರ ಅಮ್ಮ ಫಣಿಯಮ್ಮ ಮತ್ತು ಬೆಳಗಿನ ಜಾವ ನಿದ್ದೆಮಾಡಲು ಬಿಡದೆ ನಾಲ್ಕು ಗಂಟೆಗೆ ಎಬ್ಬಿಸಿ ಪೌರೋಹಿತ್ಯ ಪಾಠವನ್ನು ಹೇಳಿಕೊಟ್ಟ ನನ್ನ ಚಿಕ್ಕಪ್ಪ ಬೈಲುಕೊಪ್ಪದ ಸುಬ್ಬಯ್ಯ ಇವರುಗಳಿಂದ ಕೇಳಿದ ರಾಮಾಯಣದ ಕಥೆಯನ್ನು ವಿಶೇಷವಾಗಿ ಕನ್ನಡದ ಮಕ್ಕಳಿಗಾಗಿ ಬರೆದು ಮುದ್ರಿಸಿ ಕೊಡುವ ಪ್ರಯತ್ನ ಮಾಡಿದ್ದೇನೆ. ಇದರ ಹಿಂದಿನ ರೂವಾರಿ ನಾನು ಮೂವತ್ತೊಂಭತ್ತು ವರ್ಷಗಳಿಗೂ ಹೆಚ್ಚಾಗಿ ಪೂಜೆ ಮಾಡಿಕೊಂಡು ಬಂದ ಸುಂಟಿಕೊಪ್ಪದಲ್ಲಿರುವ ಪ್ರಭು ಶ್ರೀರಾಮಚಂದ್ರ ಸ್ವಾಮಿ.

ಈ ಪುಸ್ತಕದ ಮುಖ ಪುಟದಲ್ಲಿರುವ ಸುಂಟಿಕೊಪ್ಪದ ಶ್ರೀ ಕೋದಂಡರಾಮ ದೇವಸ್ಥಾನದ ದೇವರ ಫೋಟೋವನ್ನು ಹಾಕಲು ಅನುಮತಿ ನೀಡಿರುವ ದೇವಸ್ಥಾನದ ಮಾಲೀಕರಾದ ಶ್ರೀಮತಿ ಸರಸ್ವತಮ್ಮನವರಿಗೂ ಚಿರ ಋಣಿ

ಈ ಪುಸ್ತಕಗಳನ್ನು ಅಂದವಾಗಿ ಸಕಾಲದಲ್ಲಿ ಮುದ್ರಣಮಾಡಿಕೊಟ್ಟ ಸುಂಟಿಕೊಪ್ಪದ ಮೆಗಾಬೈಟ್‌ನ ಮಾಲೀಕರಿಗೂ ಅವರ ಕೆಲಸಗಾರರಿಗೂ ನಾನು ಚಿರಋಣಿ.

ಪ್ರಭುರಾಮಚಂದ್ರರ ಪಾದಧೂಳಿ

ಹ.ಮ. ಗಣೇಶಶರ್ಮ
ಹೊಸ ಬಡಾವಣೆ
ಸುಂಟಿಕೊಪ್ಪ .
ಉತ್ತರ ಕೊಡಗು.

ಕ್ರಿಸ್ತ ಶಕ ೧೯-೦೭-೨೦೧೩

ವಿಜಯಸಂವತ್ಸರದ ಆಷಾಢ ಶುಕ್ಲ ನವಮಿ ಶುಕ್ರವಾರ ಮೂರುಸಂಜೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ರಾಮಾಯಣ

ಕಥಾ ಸಂಗ್ರಹ

ಹ.ಮ. ಗಣೇಶ ಶರ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಲೇಖಕರು

ಹ.ಮ. ಗಣೇಶ ಶರ್ಮ
ಹೊಸ ಬಡಾವಣೆ
ಸುಂಟಿಕೊಪ್ಪ – ೫೭೧ ೨೩೭
ಉತ್ತರ ಕೊಡಗು

ವಿನ್ಯಾಸ

ಮೆಗಾಬೈಟ್
ಸುಂಟಿಕೊಪ್ಪ – ೫೭೧ ೨೩೭
ಉತ್ತರ ಕೊಡಗು

ಮುದ್ರಣ

ಮೆಗಾಬೈಟ್
ಸುಂಟಿಕೊಪ್ಪ – ೫೭೧ ೨೩೭
ಉತ್ತರ ಕೊಡಗು

ಪ್ರತಿಗಳು : ೧೦೦೦

ಬೆಲೆ : ನುಡಿದಂತೆ ನಡೆಯುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಾಮಚಂದ್ರ ಪರ ಬ್ರಹ್ಮಣೆ ನಮಃ

ಪೂರ್ವಂ ರಾಮತಪೋವನಾಭಿ ಗಮನಂ ಹತ್ವಾಮೃಗ ಕಾಂಚನಂ
ವೈದೇಹಿ ಹರಣಂ ಜಟಾಯು ಮರಣಂ ಸುಗ್ರೀವ ಸಂಬಾಷಣಂ
ವಾಲೀ ನಿಗ್ರಹಣಂ ಸಮುದ್ರ ತರಣಂ ಲಂಕಾಪುರಿ ದಹನಂ
ಪಶ್ಚಾದ್ರಾವಣ ಕುಂಭಕರ್ಣ ಮಥನಂ ಏತದ್ಯಾರಾಮಾಯಣಂ.

ಬಾಲಕಾಂಡ

ಶಾಲಿವಾಹನ ಶಕ ವರ್ಷ ೧೯೨೪ ಕಲಿಯುಗ ೫೧೧೪ ನಂದನ ಸಂವತ್ಸರದ ಆಶ್ವೀಜ ಶುದ್ಧ ಏಕಾದಶಿ ಈ ದಿನಕ್ಕೆ ಸುಮಾರು ಇಪ್ಪತ್ತೈದುಸಾವಿರ ವರ್ಷಕ್ಕೆ ಮೊದಲು ಉತ್ತರ ಭಾರತದ ಸರಯೂ ನದಿಯ ತೀರದಲ್ಲಿ ಅಯೋಧ್ಯ ಎಂಬ ಪಟ್ಟಣವೊಂದಿತ್ತು. ಅಲ್ಲಿ ದಶರಥನೆಂಬ ಕ್ಷತ್ರಿಯ ಸೂರ್ಯವಂಶದ ರಾಜನು ಧರ್ಮದಿಂದ ಪ್ರಜಾಪರಿಪಾಲನೆ ಮಾಡುತ್ತಿದ್ದನು. ಅವನು ಮಕ್ಕಳಿಗಾಗಿ ಮೂರು ಮದುವೆ ಮಾಡಿಕೊಂಡರೂ ಅವನಿಗೆ ಮಕ್ಕಳಾಗಲಿಲ್ಲ.

ಆಗ ಅವನ ಕುಲಪುರೋಹಿತರಾದ ವಸಿಷ್ಠರಲ್ಲಿ ಮಕ್ಕಳಾಗಲು ಯಾವ ಶಾಂತಿಕರ್ಮ ಆಚರಿಸಬೇಕೆಂದು ವಿನಂತಿಸಿಕೊಂಡಾಗ ಅವರು ದಂಡಾಕಾರಣ್ಯದಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿರುವ ಶೃಂಗಗಿರಿಯಲ್ಲಿ (ಈಗಿನ ಶೃಂಗೇರಿಯಲ್ಲಿ) ವಾಸವಾಗಿರುವ ಅಂಗ ದೇಶದಲ್ಲಿ ಉಂಟಾದ ಭೀಕರ ಅನಾವೃಷ್ಟಿಯನ್ನು ಪರಿಹಾರ ಮಾಡಿ ಸುವೃಷ್ಟಿಯನ್ನು ಅನುಗ್ರಹಿಸಿದ ವಿಭಾಂಡಕ ಮಹರ್ಷಿಗಳ ಏಕಮಾತ್ರ ಪುತ್ರನಾದ ಋಷ್ಯಶೃಂಗ ರನ್ನು ಕರೆದುಕೊಂಡು ಬಂದು ಅವರಿಂದ ಪುತ್ರಕಾಮೇಷ್ಟಿಯಾಗವನ್ನು ಮಾಡು ಅದರಿಂದ ನಿನಗೆ ಮಕ್ಕಳಾಗುತ್ತೆ ಎಂಬ ಮಾತನ್ನು ಹೇಳಿದರು. ಅದರಂತೆ ಆ ರಾಜನು ಋಷ್ಯಶೃಂಗ ಮಹರ್ಷಿಗಳನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಅವರ ಮುಂದಾಳತ್ವದಲ್ಲಿ ಪುತ್ರಕಾಮೇಷ್ಟಿ ಯಾಗವನ್ನು ಮಾಡಲು ಆರಂಭಿಸಿದನು. ಯಾಗದ ಕೊನೆಯ ದಿನ ಪೂರ್ಣಾಹುತಿಯಾದೊಡನೆ ಅಗ್ನಿ ಕುಂಡದಲ್ಲಿ ಯಜ್ಞೇಶ್ವರನು ಮನುಷ್ಯರೂಪದಲ್ಲಿ ಬಂದು ಒಂದು ಭಟ್ಟಲು ತುಂಬಾ ಪಾಯಸವನ್ನು ದಶರಥನಿಗೆ ಕೊಟ್ಟು ಈ ಪಾಯಸವನ್ನು ನಿನ್ನ ಹೆಂಡತಿಯರಿಗೆ ಕೊಡು ನಿನಗೆ ಮಕ್ಕಳಾಗುತ್ತೆ ಎಂದು ಹೇಳಿ ಅಂತರ್ಧಾನನಾದನು.

ರಾಜನು ಅದೇ ರೀತಿ ತನ್ನ ಮೊದಲನೆ ಹೆಂಡತಿಯಾದ ಕೌಸಲ್ಯೆಗೆ ಅರ್ಧಭಾಗ ಪಾಯಸವನ್ನು ಉಳಿದ ಅರ್ಧಭಾಗ ಪಾಯಸವನ್ನು ಎರಡನೆ ಹೆಂಡತಿ ಕೈಕೇಯಿಗೆ ಕೊಟ್ಟನು. ಆ ಇಬ್ಬರು ಹೆಂಡಿರು ತಮಗೆ ಕೊಟ್ಟ ಪಾಯಸವನ್ನು ಸಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಧಭಾಗ ಮಾಡಿ ಒಂದು ಭಾಗವನ್ನು ತಾವಿಟ್ಟುಕೊಂಡು ಉಳಿದ ಭಾಗವನ್ನು ಮೂರನೆಯ ಹೆಂಡತಿಯಾದ ಸುಮಿತ್ರೆಗೆ ಕೊಟ್ಟರು. ಅವರೆಲ್ಲಾ ಶ್ರದ್ಧಾಭಕ್ತಿಯಿಂದ ಆ ಪಾಯಸವನ್ನು ಸ್ವೀಕರಿಸಿದರು. ಕೆಲವು ದಿನಗಳಲ್ಲಿ ಆ ಮೂವರು ಗರ್ಭಿಣಿಯರಾಗಿ ನವಮಾಸ ಕಳೆದು ಕೌಸಲ್ಯೆಗೆ ಒಬ್ಬ ಮಗ ಕೈಕೇಯಿಗೆ ಒಬ್ಬ ಮಗ ಮತ್ತು ಸುಮಿತ್ರೆಗೆ ಎರಡು ಮಕ್ಕಳು ಹುಟ್ಟಿದರು. ಮಕ್ಕಳಾದ ಸಂತೋಷಕ್ಕೆ ದಶರಥ ಮಹಾರಾಜನು ಬಡಬಗ್ಗರಿಗೆ ದಾನಧರ್ಮಾದಿಗಳನ್ನು ಮಾಡಿದನು. ಹನ್ನೆರಡು ದಿನ ಕಳೆದೊಡನೆ ಆ ಮಕ್ಕಳಿಗೆ ರಾಜನು ಜಾತಕರ್ಮಾದಿಗಳನ್ನು ಮಾಡಿ ಕೌಸಲ್ಯೆಯ ಮಗನಿಗೆ ರಾಮನೆಂದು ಕೈಕೆಯಿಯ ಮಗನಿಗೆ ಭರತನೆಂದು ಸುಮಿತ್ರೆಯ ಮಕ್ಕಳಿಗೆ ಲಕ್ಷ್ಮಣ ಶತ್ರುಘ್ನರೆಂದು ನಾಮಕರಣ ಮಾಡಿದನು.

ಈ ಎಲ್ಲಾ ಮಕ್ಕಳು ಶುಕ್ಲಪಕ್ಷದ ಚಂದ್ರನಂತೆ ಬೆಳೆಯಲಾರಂಭಿಸಿದರು. ಕೆಲವು ವರ್ಷಗಳ ನಂತರ ರಾಜನು ಈ ಮಕ್ಕಳಿಗೆ ಉಪನಯನವನ್ನು ಮಾಡಿ ಕ್ಷತ್ರಿಯರಿಗೆ ಯೋಗ್ಯವಾದ ವಿದ್ಯಾಭ್ಯಾಸವನ್ನು ಮಾಡಿಸಲು ಆರಂಭಿಸಿದನು. ಹೀಗಿರುವಾಗ ಒಂದು ದಿನ ರಾಜನು ಪಂಡಿತರು ಗುರುಗಳು ಮಂತ್ರಿಗಳು ಮತ್ತು ಸಭಾಸದರಿಂದ ಕೂಡಿದವನಾಗಿ ಸಿಂಹಾಸನದಲ್ಲಿ ಕುಳಿತಿರುವಾಗ ಮಹಾ ತಪಸ್ವಿಗಳಾದ ವಿಶ್ವಾಮಿತ್ರರು ರಾಜನ ಆಸ್ಥಾನಕ್ಕೆ ಆಗಮಿಸಿದರು. ರಾಜನು ಕೂಡಲೆ ಎದ್ದು ವಿಶ್ವಾಮಿತ್ರರನ್ನು ತನ್ನ ಆಸ್ಥಾನಕ್ಕೆ ಸ್ವಾಗತಿಸಿ ಅರ್ಘ್ಯವಾದ್ಯಾದಿಗಳಿಂದ ಅವರನ್ನು ಸತ್ಕರಿಸಿ ತಮ್ಮ ಆಗಮನದಿಂದ ನಾವುಗಳೆಲ್ಲಾ ಧನ್ಯರಾದೆವು. ತಾವು ಇಲ್ಲಿಗೆ ಆಗಮಿಸಿದ ಕಾರಣವೇನೆಂದು ತಿಳಿಸಬೇಕಾಗಿ ವಿನಂತಿಸಿದನು. ಆಗ ವಿಶ್ವಾಮಿತ್ರರು ರಾಜನೆ ಲೋಕಕಲ್ಯಾಣರ್ಥವಾಗಿ ಒಂದು ಯಾಗವನ್ನು ಮಾಡಲು ನಿಶ್ಚಯಿಸಿದ್ದೇನೆ. ಆಯಾಗದ ಹೋಮಕುಂಡಕ್ಕೆ ದುಷ್ಟ ರಾಕ್ಷಸರು ರಕ್ತಮಾಂಸವನ್ನು ಹಾಕಿ ಯಾಗವನ್ನು ಕೆಡಿಸುತ್ತಾರೆ ಅದಕ್ಕಾಗಿ ನಿನ್ನ ಮಕ್ಕಳಾದ ರಾಮ ಲಕ್ಷ್ಮಣರನ್ನು ನನ್ನೊಡನೆ ಕಳುಹಿಸು ಅವರು ಧನುರ್ದಾರಿಗಳಾಗಿ ನಿಂತು ರಾಕ್ಷಸರನ್ನು ಸಂಹರಿಸಿ ನನ್ನ ಯಜ್ಞಸಾಂಗವಾಗಿ ನೆರವೇರಿಸಿ ಕೊಡುತ್ತಾರೆ ಎಂದು ಹೇಳಿದರು.

ಆಗ ದಶರಥರಾಜನು ಪೂಜ್ಯರೇ ನನ್ನ ಮಕ್ಕಳಾದ ರಾಮಲಕ್ಷ್ಮಣರು ಇನ್ನೂ ಎಳೆಯರು ಅವರಿಂದ ಈ ಕೆಲಸ ಸಾಧ್ಯವಾಗದು ಅಪ್ಪಣೆಯಾದರೆ ನಾನೆ ನನ್ನ ಪರಿವಾರದೊಡನೆ ಆಗಮಿಸಿ ನಿಮ್ಮ ಯಜ್ಞಕ್ಕೆ ತಡೆಮಾಡುವ ರಾಕ್ಷಸರನ್ನು ಸಂಹರಿಸಿ ನಿಮ್ಮ ಯಜ್ಞವನ್ನು ಸಾಂಗವಾಗಿ ನೆರವೇರಿಸಿಕೊಡುವೆನು ಎಂದನು.

ಆಗ ವಿಶ್ವಾಮಿತ್ರನು ನೀನು ಬರುವುದು ಬೇಡ ರಾಮಲಕ್ಷ್ಮಣರನ್ನೇ ಕಳುಹಿಸು ಎಂದು ಬಲವಂತ ಮಾಡುತ್ತಾರೆ. ಆಗ ರಾಜ ಸಣ್ಣ ಮಕ್ಕಳನ್ನು ಹೇಗೆ ಅವರೊಡನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಳುಹಿಸುವುದು ಎಂದು ಚಿಂತೆಯಲ್ಲಿದ್ದಾಗ ಕುಲಪುರೋಹಿತರಾದ ವಸಿಷ್ಠರು ವಿಶ್ವಾಮಿತ್ರರು ಸಾಮಾನ್ಯರಲ್ಲ ಅವರೊಡನೆ ನಿನ್ನ ಮಕ್ಕಳನ್ನು ಕಳುಹಿಸಿದರೆ ನಿನ್ನ ಮಕ್ಕಳಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಧೈರ್ಯ ಹೇಳುತ್ತಾರೆ. ಅದರಂತೆ ದಶರಥರಾಜನು ತನ್ನ ಮಕ್ಕಳಾದ ರಾಮಲಕ್ಷ್ಮಣರನ್ನು ವಿಶ್ವಾಮಿತ್ರರ ಜೊತೆಯಲ್ಲಿ ಕಳುಹಿಸುತ್ತಾನೆ. ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಕರೆದುಕೊಂಡು ತಮ್ಮ ಆಶ್ರಮಕ್ಕೆ ಹೋಗುತ್ತಾರೆ ಮತ್ತು ಕ್ಷತ್ರಿಯರಿಗೆ ಅವಶ್ಯವಾದ ಧನುರ್ವಿದ್ಯೆ ಮೊದಲಾದ ವಿದ್ಯೆಗಳನ್ನು ಕಲಿಸುತ್ತಾರೆ. ರಾಮಲಕ್ಷ್ಮಣರು ಅರಣ್ಯವಾಸಿ ಋಷಿಜನಗಳಿಗೆ ಕಂಟಕರಾಗಿದ್ದ ತಾಟಕಿ ಮತ್ತು ಅವಳ ಮಗನಾದ ಸುಬಾಹುವನ್ನು ಸಂಹರಿಸುತ್ತಾರೆ. ವಿಶ್ವಾಮಿತ್ರರು ಇತರೆ ಋಷಿಗಳನ್ನು ಕೂಡಿಕೊಂಡು ಲೋಕಕಲ್ಯಾಣಾರ್ಥವಾಗಿ ಯಜ್ಞವೊಂದನ್ನು ಆರಂಭಿಸಿದರು. ಯಜ್ಞವನ್ನು ನಾಶಮಾಡಲು ಸುಬಾಹು ಮಾರೀಚ ಎಂಬ ರಾಕ್ಷಸರು ತಮ್ಮ ಅನುಚರರೊಡಗೂಡಿ ಯಜ್ಞಶಾಲೆಯ ಕುಂಡಗಳಲ್ಲಿ ರಕ್ತದ ಮಳೆಗೆರೆಯಲು ಬಂದರು. ಇದನ್ನು ನೋಡಿದ ರಾಮಲಕ್ಷ್ಮಣರು ಸುಬಾಹುವನ್ನು ಕೊಂದು ಉಳಿದ ರಾಕ್ಷಸರನ್ನು ಹೊಡೆದು ಓಡಿಸಿದರು. ಯಜ್ಞಸಾಂಗವಾಗಿ ನೆರವೇರಿತು. ಇದರಿಂದ ಸಂತೋಷಗೊಂಡ ಋಷಿಜನರು ರಾಮಲಕ್ಷ್ಮಣರನ್ನು ಕೊಂಡಾಡಿದರು.

ಅಲ್ಲಿ ಸಮೀಪದಲ್ಲೇ ಮಿಥಿಲಾ ಎಂಬ ರಾಜ್ಯವಿತ್ತು ಅಲ್ಲಿ ಜನಕನೆಂಬ ರಾಜನು ತನ್ನ ಮಗಳಾದ ಸೀತಾದೇವಿಗೆ ಮದುವೆ ಮಾಡಬೇಕೆಂದು ನಿಶ್ಚಯಿಸಿ ತನ್ನಲ್ಲಿರುವ ಶಿವಧನಸ್ಸನ್ನು ಎತ್ತಿ ಯಾರು ಅದರಿಂದ ಬಾಣಪ್ರಯೋಗ ಮಾಡುತ್ತಾರೋ ಅವರಿಗೆ ತನ್ನ ಮಗಳನ್ನು ಕೊಡುವುದಾಗಿ ಭರತಖಂಡದ ಎಲ್ಲಾ ರಾಜರುಗಳಿಗೂ ಪತ್ರಿಕೆ ಕಳುಹಿಸಿರುತ್ತಾನೆ. ಈ ವಿಷಯ ವಿಶ್ವಾಮಿತ್ರರಿಗೆ ತಿಳಿಯುತ್ತದೆ ಆಗ ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಕರೆದುಕೊಂಡು ಮಿಥಿಲಾ ಪಟ್ಟಣಕ್ಕೆ ಹೊರಡುತ್ತಾರೆ ಹೋಗುವಾಗ ಶ್ರೀರಾಮನು ದಾರಿಯಲ್ಲಿ ಒಂದು ಕಲ್ಲನ್ನು ತುಳಿಯುತ್ತಾನೆ, ತುಳಿದೊಡನೆ ಆ ಕಲ್ಲು ಒಂದು ಹೆಣ್ಣಾಗುತ್ತೆ ಆ ಹೆಣ್ಣು ರಾಮನಿಗೆ ನಮಸ್ಕರಿಸಿ ತಾನು ಗೌತಮ ಋಷಿಯ ಪತ್ನಿಯಾಗಿದ್ದೇನೆ ನನ್ನ ಹೆಸರು ಅಹಲ್ಯ ನನ್ನ ನಡವಳಿಕೆಯಿಂದ ಸಿಟ್ಟಿಗೆದ್ದ ನನ್ನ ಪತಿ ಕಲ್ಲಾಗೆಂದು ಶಾಪವಿತ್ತರು ನನ್ನನ್ನು ಕ್ಷಮಿಸಿ ಮೊದಲಿನಂತೆ ಹೆಣ್ಣಾಗಿ ತಮ್ಮೊಡನೆ ಇರಲು ಅವಕಾಶ ಮಾಡಿಕೊಡಬೇಕೆಂದು ಅವರನ್ನು ಪ್ರಾರ್ಥಿಸಿದೆ ಅವರು ಮುಂದೆ ಒಂದು ದಿನ ಮಹಾವಿಷ್ಣುವು ಶ್ರೀರಾಮನಾಗಿ ಅವತರಿಸಿ ನಿನ್ನಲ್ಲಿಗೆ ಬರುತ್ತಾನೆ ಅವನ ಪಾದ ಸ್ಪರ್ಶದಿಂದ ನೀನು ಮೊದಲಿನಂತೆ ಹೆಣ್ಣಾಗುವೆ ಎಂದು ಆಶ್ವಾಸನೆ ಕೊಟ್ಟರು. ಅದರಂತೆ ತಮ್ಮ ಪಾದಸ್ಪರ್ಶದಿಂದ ಮೊದಲಿನಂತೆ ಆದೆ ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮನಿಗೆ ನಮಸ್ಕಾರ ಮಾಡಿದಳು. ರಾಮನು ಆಕೆಯನ್ನು ಅವರ ಗಂಡನಾದ ಗೌತಮರ ಹತ್ತಿರ ಸೇರಿಸಿ ಅವರ ಆತಿಥ್ಯ ಸ್ವೀಕರಿಸಿದರು. ವಿಶ್ವಾಮಿತ್ರರು ರಾಮಲಕ್ಷ್ಮಣರೊಡನೆ ಮಿಥಿಲಾ ಪಟ್ಟಣದಲ್ಲಿ ನಡೆಯುವ ಸೀತಾಸ್ವಯಂವರದ ಮಂಟಪಕ್ಕೆ ಬಂದು ಸೇರಿದರು.

ಅಲ್ಲಿ ದೊಡ್ಡದಾದ ಶಿವಧನಸ್ಸನ್ನು ಇಟ್ಟಿದ್ದರು. ಸೀತಾದೇವಿಯನ್ನು ಮದುವೆಯಾಗುವ ಇಚ್ಛೆಯಿಂದ ಬಹಳಷ್ಟು ರಾಜಕುಮಾರರು ಆ ಧನಸ್ಸನ್ನು ಎತ್ತಲು ಪ್ರಯತ್ನಿಸಿ ಸೋತು ಹೋಗುತ್ತಾರೆ. ಆಗ ವಿಶ್ವಾಮಿತ್ರರು ರಾಮನಿಗೆ ಧನಸ್ಸನ್ನು ಎತ್ತುವಂತೆ ಆದೇಶಿಸುತ್ತಾರೆ ಅಂತೆಯೇ ರಾಮನು ಧನಸ್ಸನ್ನು ಎತ್ತಿ ಹೆದೆಯೇರಿಸುವಾಗ ಧನಸ್ಸು ಮುರಿದು ಹೋಗುತ್ತೆ. ಆಗ ಸೀತಾದೇವಿ ರಾಮನಿಗೆ ಹೂಮಾಲೆ ಹಾಕುತ್ತಾಳೆ. ಜನಕರಾಜ ಸೀತಾದೇವಿಯ ತಂದೆ ದಶರಥ ಮಹಾರಾಜನಿಗೆ ಅಮಾತ್ಯರ ಮೂಲಕ ತಿಳಿಸಿ ದಶರಥಮಹಾರಾಜ ಮತ್ತು ಅವನ ರಾಣಿಯರು ಮತ್ತು ಭರತ ಶತ್ರುಘ್ನರನ್ನು ತನ್ನ ಅರಮನೆಗೆ ಕರೆಸಿಕೊಂಡು ರಾಮನಿಗೆ ತನ್ನ ಮಗಳಾದ ಸೀತೆಯನ್ನು ಲಕ್ಷ್ಮಣ ಭರತ ಶತ್ರುಘ್ನರಿಗೆ ಕ್ರಮವಾಗಿ ತನ್ನ ತಮ್ಮನ ಮಕ್ಕಳಾದ ಊರ್ಮಿಳೇ ಮಾಂಡವಿ ಮತ್ತು ಶ್ರುತಕೀರ್ತಿಯನ್ನು ಕೊಟ್ಟು ಮದುವೆ ಮಾಡಿ ಅಯೋಧ್ಯೆಗೆ ಕಳುಹಿಸುತ್ತಾನೆ. ಅಯೋಧ್ಯೆಗೆ ರಾಮಲಕ್ಷ್ಮಣ ಭರತ ಶತ್ರುಘ್ನ ಹೀಗೆ ಪರಿವಾರ ಸಮೇತ ಬರುವಾಗ ಪರಶುರಾಮ ಎಂಬ ಮಹರ್ಷಿ ಶ್ರೀರಾಮನನ್ನು ಸಂಹರಿಸಬೇಕೆಂದು ಯುದ್ಧ ಮಾಡಿ ಸೋತು ಹೋಗುತ್ತಾನೆ ಎಲ್ಲರೂ ಅಯೋಧ್ಯೆ ಸೇರಿ ಸುಖವಾಗಿ ಇರುತ್ತಾರೆ.

<u>ಅಯೋದ್ಯಾ ಕಾಂಡ</u>

ಒಂದು ದಿನ ದಶರಥ ಮಹಾರಾಜ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳತ್ತಾನೆ. ತನ್ನ ಗಡ್ಡ ಮೀಸೆ ಬೆಳ್ಳಗಾಗಿದ್ದನ್ನು ತಿಳಿದು ನನಗೆ ವಯಸ್ಸಾಗಿದೆ ರಾಜ್ಯಭಾರದ ಹೊರೆ ಹೊರುವುದು ಕಷ್ಟಸಾಧ್ಯ ಆದುದರಿಂದ ನನ್ನ ಹಿರಿಯ ಮಗನಾದ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡಿ ರಾಜ್ಯಭಾರವನ್ನು ಅವನಿಗೆ ವಹಿಸುವುದೆಂದು ನಿಶ್ಚಯಿಸಿ ಕುಲಪುರೋಹಿತರಾದ ವಸಿಷ್ಠರು ಆಪ್ತರಾದ ಮಂತ್ರಿಗಳನ್ನು ಕರೆಸಿಕೊಂಡು ತನ್ನ ಮನೋಗತವನ್ನು ಅವರಲ್ಲಿ ತಿಳಿಸಿ ರಾಮನಿಗೆ ಪಟ್ಟಾಭಿಷೇಕಕ್ಕೆ ವಸಿಷ್ಠರಿಂದ ಮೂಹೂರ್ತವನ್ನು ತಿಳಿದು ಪಟ್ಟಾಭಿಷೇಕಕ್ಕೆ ತಯಾರಿ ನಡೆಸುತ್ತಾನೆ.

ಈ ವಿಚಾರ ದಶರಥನ ಎರಡನೆ ಹೆಂಡತಿಯಾದ ಕೈಕೇಯಿಯ ದಾಸಿಯಾದ ಮಂಥರೆಗೆ ತಿಳಿಯುತ್ತೆ. ಆಕೆ ಕೈಕೆಯಿಗೆ ನಿನ್ನ ಮಗನಾದ ಭರತನಿಗೆ ಪಟ್ಟಭಿಷೇಕವಾಗಬೇಕು ಮತ್ತು ಶ್ರೀರಾಮನು ಹನ್ನೆರಡು ವರ್ಷ ವನವಾಸಕ್ಕೆ

CC-O. In Public Domain. Digitized by eGangotri

ಕಳುಹಿಸಬೇಕೆಂದು ರಾಜನೊಡನೆ ಹೇಳು ಮತ್ತು ರಾಮನಿಗೆ ಪಟ್ಟಾಭಿಷೇಕವಾದರೆ ರಾಮನ ತಾಯಿ ರಾಜಮಾತೆಯಾಗುತ್ತಾಳೆ ನಿನ್ನನ್ನು ನಿನ್ನ ಮಗ ಭರತನನ್ನು ಹೀನಾಯವಾಗಿ ಕಾಣುತ್ತಾರೆಂದು ಬೋಧನೆ ಮಾಡುತ್ತಾಳೆ. ಕೈಕೇಯಿಯು ಹಾಗೆಯೇ ರಾಜನೊಡನೆ ಭರತನಿಗೆ ಪಟ್ಟಾಭಿಷೇಕವಾಗಬೇಕು ಶ್ರೀರಾಮನು ೧೪ವರ್ಷ ವನವಾಸಕ್ಕೆ ಕಳುಹಿಸಬೇಕೆಂದು ಹಟ ಹಿಡಿಯುತ್ತಾಳೆ. ದಶರಥನು ಮೊದಲು ಆಕೆಯ ಮಾತಿಗೆ ಒಪ್ಪುವುದಿಲ್ಲ. ಆಗ ಕೈಕೇಯಿಯು ಹಿಂದೆ ರಾಕ್ಷಸರೊಡನೆ ದಶರಥ ಯುದ್ಧಮಾಡುವಾಗ ದಶರಥನಿಗೆ ಒದಗಿದ ವಿಪತ್ತನ್ನು ಕೈಕೇಯಿಯು ಪರಿಹಾರ ಮಾಡಿ ದಶರಥನಿಗೆ ಜಯವನ್ನು ತಂದುಕೊಟ್ಟಿದ್ದಳು. ಆಗ ಸಂತೋಷಗೊಂಡ ದಶರಥನು ಕೈಕೆಗೆ ಎರಡು ವರಗಳನ್ನು ಕೊಟ್ಟಿದ್ದನು. ಕೈಕೆ ಈ ವರಗಳು ಈಗ ಬೇಡ ಮುಂದೆ ಬೇಕಾದಾಗ ಕೇಳುತ್ತೇನೆ ಎಂದು ಹೇಳಿದ್ದಳು. ಈಗ ಈ ಎರಡು ವರಗಳಲ್ಲಿ ಮೊದಲನೆಯದು ಭರತನಿಗೆ ಪಟ್ಟಾಭಿಷೇಕವಾಗಬೇಕು ಎರಡನೆಯದು ಶ್ರೀರಾಮನನ್ನು ೧೪ವರ್ಷ ಮನವಾಸಕ್ಕೆ ಕಳುಹಿಸಬೇಕು ಇದೇ ಈಗ ನನಗೆ ಬೇಕಾಗಿರುವ ವರಗಳು ಎಂದು ಹೇಳುತ್ತಾಳೆ. ಆಗ ದಶರಥರಾಜನು ಈ ವರಗಳು ಬೇಡ ಬೇರೆ ಏನಾದರೂ ಕೇಳು ಅದನ್ನು ಪೂರೈಸಿಕೊಡುತ್ತೇನೆ ಎಂದು ಪರಿಪರಿಯಾಗಿ ಕೈಕೆಯೊಡನೆ ಪ್ರಾರ್ಥಿಸುತ್ತಾನೆ. ಆದರೆ ಅವಳ ಮನಸ್ಸು ಕರಗಲಿಲ್ಲ. ಈ ಎರಡು ವರಗಳೇ ಬೇಕೆಂದು ಹಠಹಿಡಿಯುತ್ತಾಳೆ. ಆಗ ದಶರಥನು ನಿಸ್ಸಾಹಯಕನಾಗಿ ಕಣ್ಣೀರು ಸುರಿಸುತ್ತಾ ನೆಲದ ಮೇಲೆ ಬಿದ್ದು ಬಿಡುತ್ತಾನೆ. ಅಷ್ಟರಲ್ಲಿ ದಶರಥನನ್ನು ನೋಡಲು ಶ್ರೀರಾಮನು ಅಲ್ಲಿಗೆ ಬರುತ್ತಾನೆ ದಶರಥನಿಗೆ ಹೀಗೆ ಕಣ್ಣೀರು ಸುರಿಸಿ ಮಲಗಿದ್ದನ್ನು ಕಂಡು ಕೈಕೆಯೊಡನೆ ಯಾಕೆ ದಶರಥ ರಾಜನು ಹೀಗೆ ನೆಲದ ಮೇಲೆ ಕಣ್ಣೀರು ಸುರಿಸುತ್ತಾ ಮಲಗಲು ಕಾರಣವೇನೆಂದು ಕೇಳುತ್ತಾನೆ. ಆಗ ಕೈಕೆಯು ನಿನ್ನ ತಂದೆ ದಶರಥ ಮಹಾರಾಜರು ನನಗೆ ಎರಡು ವರಗಳನ್ನು ಕೊಟ್ಟಿದ್ದರು ನಾನು ಆಗ ಆ ಎರಡು ವರಗಳನ್ನು ಅವರ ಹತ್ತಿರವೇ ಇಟ್ಟಿದ್ದೆ. ಈಗ ಆ ಎರಡು ವರಗಳಲ್ಲಿ ಒಂದು ಭರತನಿಗೆ ಪಟ್ಟಾಭಿಷೇಕ ಎರಡನೆಯದು ನೀನು ೧೪ ವರ್ಷ ವನವಾಸಕ್ಕೆ ಹೋಗಬೇಕೆಂದು ಹಿಂದೆ ನನಗೆ ಕೊಟ್ಟಿದ್ದ ವರಗಳನ್ನು ಪೂರೈಸಲು ಅಶಕ್ತರಾಗಿ ಹೀಗೆ ನೆಲದ ಮೇಲೆ ಹೊರಳಾಡುತ್ತಾರೆಂದು ಕೈಕೆ ಹೇಳಿದಳು. ಆಗ ಶ್ರೀರಾಮನು ನಮ್ಮ ಸೂರ್ಯವಂಶದ ಯಾವ ಮಹಾರಾಜರು ಆಡಿದ ಮಾತಿಗೆ ತಪ್ಪಿದವರಲ್ಲಾ ಈಗ ನಮ್ಮ ತಂದೆಯವರು ಮಾತಿಗೆ ತಪ್ಪುವುದು ಬೇಡ ನಾನು ೧೪ವರ್ಷ ಕಾಡಿಗೆ ಹೋಗುತ್ತೇನೆ ಭರತನಿಗೆ ಪಟ್ಟಾಭಿಷೇಕ ವಾಗಲಿ ಎಂದು ಹೇಳಿ ತಾಯಿಯಾದ ಕೌಸಲ್ಯೆ ಮತ್ತು ಸೀತಾಲಕ್ಷ್ಮಣರ ಹತ್ತಿರ ಈ ವಿಚಾರ ತಿಳಿಸುತ್ತಾನೆ.

CC-O. Vidyabharathi Book Centre, Sringeri

CC-O. In Public Domain. Digitized by eGangotri

ಅವರೆಲ್ಲರೂ ರಾಮನೊಡನೆ ಕಾಡಿಗೆ ಬರುವುದಾಗಿ ಹೇಳುತ್ತಾರೆ ಆಗ ರಾಮ ದಶರಥರಾಜರು ಈಗ ಇಂಥಹ ಸಂಕಟದಲ್ಲಿರುವಾಗ ರಾಜರನ್ನು ಬಿಟ್ಟು ನನ್ನ ಜೊತೆ ಬರುವುದು ಸರಿಯಲ್ಲವೆಂದು ತಾಯಿಯನ್ನು ಬಿಟ್ಟು ಸೀತಾಲಕ್ಷ್ಮಣರೊಡನೆ ಅರಣ್ಯಕ್ಕೆ ಹೋಗುತ್ತಾನೆ.

ದಶರಥರಾಜನು ರಾಮನ ಅಗಲುವಿಕೆಯನ್ನು ಸಹಿಸಲಾರದೆ ಮರಣಹೊಂದುತ್ತಾನೆ. ಈ ವಿಚಾರ ಕುಲಪುರೋಹಿತರಾದ ವಸಿಷ್ಠರಿಗೆ ತಿಳಿಯುತ್ತೆ. ಅವರು ಮಂತ್ರಿಗಳು ಮತ್ತು ಇತರ ರಾಜಪ್ರಮುಖರಲ್ಲಿ ಚರ್ಚಿಸಿ ದಶರಥನ ಶರೀರವನ್ನು ಎಣ್ಣೆಯ ದೋಣಿಯಲ್ಲಿಟ್ಟು ಮಾವನ ಮನೆಗೆ ಹೋಗಿದ್ದ ಭರತ ಶತ್ರುಘ್ನರಿಗೆ ರಾಮನ ವನವಾಸ ಮತ್ತು ದಶರಥನ ಮರಣವನ್ನು ತಿಳಿಸದೆ ಶೀಘ್ರವಾಗಿ ಭರತ ಶತ್ರುಘ್ನರನ್ನು ಕರೆತರಲು ದೂತರನ್ನು ಕುದುರೆಯ ಮೇಲೆ ಕಳುಹಿಸುತ್ತಾನೆ. ಹಾಗೆ ಹೋದ ದೂತರು ಭರತನ ಮಾವನ ಮನೆಗೆ ಹೋಗಿ ವಿಷಯ ತಿಳಿಸುತ್ತಾರೆ ಭರತ ಮತ್ತು ಶತ್ರುಘ್ನರು ತಕ್ಷಣ ಹೊರಟು ಅಯೋಧ್ಯೆಯ ಅರಮನೆಗೆ ಬರುತ್ತಾರೆ ಇಡೀ ಅರಮನೆಯು ರಾಮನ ವಿಯೋಗ ಮತ್ತು ದಶರಥನ ಮರಣದಿಂದ ಶೋಕದಲ್ಲಿ ಮುಳುಗಿತ್ತು. ಯಾರೂ ತಲೆ ಎತ್ತಿ ಓಡಾಡುತ್ತಿರಲಿಲ್ಲ. ಅರಮನೆಯಲ್ಲೂ ಎಲ್ಲರೂ ತಲೆ ತಗ್ಗಿಸಿ ನಿಂತುಕೊಂಡಿದ್ದರು. ಭರತನ ಹತ್ತಿರ ಯಾರೂ ಮಾತನಾಡಲಿಲ್ಲ. ಭರತ ನೇರವಾಗಿ ತಾಯಿ ಕೈಕೆಯ ಅಂತಃಪುರಕ್ಕೆ ಹೋಗಿ ತಾಯಿಗೆ ನಮಸ್ಕರಿಸಿ ಅಮ್ಮ ನನ್ನನ್ನು ಯಾತಕ್ಕಾಗಿ ಹೀಗೆ ಕರೆಸಿಕೊಂಡಿರಿ ಯಾರೂ ಯಾಕೆ ಮಾತನಾಡುತ್ತಿಲ್ಲ. ತಂದೆ ದಶರಥ ಮಹಾರಾಜರೆಲ್ಲಿ ಶ್ರೀರಾಮನೆಲ್ಲಿ ಎಂದು ಕೇಳುತ್ತಾನೆ ಆಗ ಕೈಕೆಯು ತಾನು ಮಾಡಿದ ಈ ಕೆಲಸದಿಂದ ಭರತನು ಸಂತೋಷಗೊಳ್ಳುತ್ತಾನೆಂದು ತಿಳಿದು ಮಹಾರಾಜರಲ್ಲಿ ನಿನಗೆ ರಾಜ್ಯದ ಪಟ್ಟಾಭಿಷೇಕವಾಗಬೇಕು ಮತ್ತು ಶ್ರೀರಾಮನನ್ನು ೧೪ ವರ್ಷ ವನವಾಸಕ್ಕೆ ಕಳುಹಿಸಬೇಕೆಂದು ಬೇಡಿದೆ ಹಾಗೆ ರಾಮನು ಸೀತಾಲಕ್ಷ್ಮಣರೊಡನೆ ವನವಾಸಕ್ಕೆ ಹೋದ ಆ ದುಃಖ ಸಹಿಸಲಾರದೆ ಮಹಾರಾಜರು ಮರಣವನ್ನಪ್ಪಿದರು ನೀನು ಪಟ್ಟಾಭಿಷಕ್ತನಾಗಿ ರಾಜ್ಯಭಾರ ಮಾಡು ಎಂದು ಹೇಳಿದಳು.

ಇದನ್ನು ಕೇಳಿ ಭರತನ್ನು ಮೂರ್ಚೆ ಹೋದನು. ಕೈಕೆ ಮೊದಲಾದವರು ಭರತನಿಗೆ ಶೈತ್ಯೋಪಚಾರ ಮಾಡಿದರು. ಸ್ವಲ್ಪಹೊತ್ತಿನಲ್ಲಿ ಭರತನಿಗೆ ಎಚ್ಚರವಾಯಿತು. ಭರತನು ಮಕ್ಕಳಂತೆ ಬಿಕ್ಕಿ ಬಿಕ್ಕಿ ಅಳುತ್ತಾ ಅಣ್ಣ ರಾಮನು ಯಾವ ತಪ್ಪು ಮಾಡಿದ್ದಾನೆ ಯಾತಕ್ಕಾಗಿ ಕಾಡಿಗೆ ಕಳುಹಿಸಿದಿರಿ ನನಗೆ ಈ ರಾಜ್ಯವೂ ಬೇಡ ರಾಮನಿಲ್ಲದ ಈ ರಾಜ್ಯದಲ್ಲಿ ನಾನು ಇರುವುದಿಲ್ಲ ನಾನು ರಾಮನೊಡನೆ ಅರಣ್ಯಕ್ಕೆ ಹೋಗುತ್ತೇನೆ ಎಂದು ಕಾಡಿಗೆಹೋಗಲು ಉದ್ಯುಕ್ತನಾದನು. ಆಗ ವಸಿಷ್ಠಾದಿಗಳು ಭರತನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮಾಧಾನಮಾಡಿ ದಶರಥನ ಉತ್ತರಕ್ರಿಯಾದಿಗಳನ್ನು ಭರತನಿಂದ ಮಾಡಿಸಿದರು. ಶ್ರೀರಾಮನು ಕಾಡಿಗೆ ಹೋಗುವುದು ಎಲ್ಲಾ ಪ್ರಜೆಗಳಿಗೂ ಇಷ್ಟವಿಲ್ಲದ ವಿಚಾರ ಹಾಗಾಗಿ ಪ್ರಜೆಗಳೆಲ್ಲಾ ರಾಮನ ಜೊತೆಯಲ್ಲಿ ಹೊರಡುತ್ತಾರೆ. ಆಗ ಶ್ರೀರಾಮ ಎಲ್ಲರಿಗೂ ಸಮಾಧಾನ ಹೇಳಿ ಅವರುಗಳನ್ನು ಹಿಂದಕ್ಕೆ ಕಳುಹಿಸುತ್ತಾನೆ. ಸೀತಾ ಲಕ್ಷ್ಮಣರೊಡನೆ ಗಂಗಾ ನದಿಯ ತೀರಕ್ಕೆ ಬರುತ್ತಾನೆ. ಅಲ್ಲಿ ಬೇಡರ ರಾಜನಾದ ಗುಹನು ಶ್ರೀರಾಮನನ್ನು ಆದರದಿಂದ ಬರಮಾಡಿಕೊಂಡು ದೋಣಿಯಲ್ಲಿ ಗಂಗಾನದಿಯನ್ನು ದಾಟಿಸುತ್ತಾನೆ ಅಲ್ಲಿರುವ ಭಾರದ್ವಾಜ ಮುನಿಗಳ ಆಶ್ರಮಕ್ಕೆ ಹೋಗಿ ಅವರ ಆತಿಥ್ಯವನ್ನು ಸ್ವೀಕರಿಸಿ ಮುಂದೆ ಚಿತ್ರಕೂಟವೆಂಬ ಪ್ರದೇಶದಲ್ಲಿ ಸಣ್ಣ ಪರ್ಣಕುಟೀರವನ್ನು ಕಟ್ಟಿಕೊಂಡು ಕಾಡಿನಲ್ಲಿ ಸಿಗುವ ಗೆಡ್ಡೆಗೆಣಸು ಹಣ್ಣು ಮುಂತಾದವುಗಳನ್ನು ಸೇವಿಸುತ್ತಾ ಅಲ್ಲಿರುತ್ತಾರೆ. ದಶರಥ ಮಹಾರಾಜನ ಉತ್ತರಕ್ರಿಯೆಗಳೆಲ್ಲಾ ಮುಗಿದ ನಂತರ ಭರತನಿಗೆ ಪಟ್ಟಾಭಿಷಿಕ್ತನಾಗುವುದು ಎಂದು ವಸಿಷ್ಠರು ಮತ್ತು ಮಂತ್ರಿಗಳು ರಾಜಪರಿವಾರದವರು ಹೇಳುತ್ತಾರೆ ಆದರೆ ಭರತ ಹಿರಿಯ ಅಣ್ಣ ಶ್ರೀರಾಮನನ್ನು ಬಿಟ್ಟು ನಾನು ಪಟ್ಟಾಭಿಷಿಕ್ತನಾಗಲಾರೆ ಶ್ರೀರಾಮನನ್ನು ಕರೆತಂದು ಅವನನ್ನೇ ಪಟ್ಟಾಭಿಷಿಕ್ತನಾಗಿ ಮಾಡುತ್ತೇನೆಂದು ಸಣ್ಣ ಪರಿವಾರದೊಡನೆ ರಾಮನನ್ನು ಹುಡುಕುತ್ತಾ ಕಾಡಿಗೆ ಹೋಗುತ್ತಾನೆ. ರಾಮನನ್ನು ಹುಡುಕುತ್ತಾ ಹುಡುಕುತ್ತಾ ಚಿತ್ರಕೂಟದಲ್ಲಿರುವ ರಾಮನನ್ನು ಕಂಡು ರಾಮನ ಕಾಲಿಗೆ ಬಿದ್ದು ತನ್ನ ತಾಯಿಯಿಂದ ಆದ ಅನಾಹುತವನ್ನು ಕ್ಷಮಿಸಬೇಕೆಂದು ಮತ್ತು ದಶರಥ ಮಹಾರಾಜರು ಸ್ವರ್ಗಸ್ಥರಾದುದನ್ನು ತಿಳಿಸುತ್ತಾನೆ. ಶ್ರೀರಾಮ ಸೀತೆ ಲಕ್ಷ್ಮಣರು ದಶರಥ ಮಹಾರಾಜರ ಮರಣ ವಾರ್ತೆಯನ್ನು ಕೇಳಿ ತುಂಬಾ ದುಃಖಿಸುತ್ತಾರೆ. ರಾಮ ಭರತನಿಗೆ ಹೇಳುತ್ತಾನೆ ನಮ್ಮ ತಂದೆ ದಶರಥ ಮಹಾರಾಜರು ನಿನ್ನ ತಾಯಿ ಕೈಕೆಗೆ ಕೊಟ್ಟ ವರಗಳನ್ನು ಪೂರೈಸಬೇಕಾದದ್ದು ಅವರ ಮಕ್ಕಳಾದ ನಮ್ಮ ಕರ್ತವ್ಯ. ಅದನ್ನು ನಾವು ಪೂರೈಸಬೇಕು. ಅದಕ್ಕಾಗಿ ನೀನು ಪಟ್ಟಾಭಿಷಕ್ತನಾಗಿ ರಾಜ್ಯಭಾರ ಮಾಡು ನಾನು ಹದಿನಾಲ್ಕು ವರ್ಷವನವಾಸ ಪೂರೈಸಿ ಅಯೋಧ್ಯೆಗೆ ಮರಳುತ್ತೇನೆ ಎಂದು ರಾಮನು ಹೇಳುತ್ತಾನೆ. ಆಗ ಭರತನು ನಾನು ಖಂಡಿತ ಪಟ್ಟಾಭಿಷಕ್ತನಾಗಲಾರೆ ನಿನ್ನ ಪಾದುಕೆಗಳನ್ನು ಕೊಡು ಅದನ್ನು ಸಿಂಹಾಸನದ ಮೇಲಿಟ್ಟು ನಿನ್ನ ಪ್ರತಿನಿಧಿಯಾಗಿ ರಾಜ್ಯಭಾರ ಮಾಡುತ್ತೇನೆಂದು ಹೇಳಿ ಶ್ರೀರಾಮನ ಪಾದುಕೆಯನ್ನು ತಲೆಯ ಮೇಲೆ ಇಟ್ಟುಕೊಂಡು ಬಂದು ಅಯೋಧ್ಯೆಯ ಸಿಂಹಾಸನದ ಮೇಲಿಟ್ಟು ರಾಜ್ಯಭಾರ ಮಾಡುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಣ್ಯಕಾಂಡ

ರಾಮಲಕ್ಷ್ಮಣರು ಅಲ್ಲಿರುವ ಶಾಸ್ತ್ರವೇತ್ತರಾದ ಋಷಿ ಮುನಿಗಳ ಮಾರ್ಗದರ್ಶನದಂತೆ ದಶರಥ ಮಹಾರಾಜರಿಗೆ ಪಿತೃತರ್ಪಣಾದಿಗಳನ್ನು ಮಾಡುತ್ತಾರೆ ಆನಂತರ ಅಗಸ್ತ್ಯಾದಿ ಋಷಿ ಮುನಿಗಳ ಆಶ್ರಮಕ್ಕೆ ಹೋಗಿ ಅವರುಗಳ ಆತಿಥ್ಯ ಮತ್ತು ಅವರ ಆಶೀರ್ವಾದಗಳನ್ನು ಪಡೆಯುತ್ತಾ ಮುಂದೆ ಮುಂದೆ ಸಾಗಿ ಗೋದಾವರಿ ನದೀ ತೀರಕ್ಕೆ ಸಾಗಿ ಅಲ್ಲಿಯೇ ಇರುವ ಪಂಚವಟಿ ಎಂಬಲ್ಲಿ ಪರ್ಣಕುಟೀರವನ್ನು ಕಟ್ಟಿಕೊಂಡು ಕೆಲವು ದಿನ ಅಲ್ಲಿಯೇ ಇರುತ್ತಾರೆ. ಆಗ ಅಲ್ಲಿಗೆ ರಾವಣನ ತಂಗಿಯಾದ ಶೂರ್ಪನಕಿ ಬರುತ್ತಾಳೆ ಶ್ರೀರಾಮನನ್ನು ನೋಡಿ ಕಾಮಮೋಹಿತಳಾಗಿ ತನ್ನನ್ನು ಮದುವೆ ಆಗು ಎಂದು ರಾಮನನ್ನು ಪೀಡಿಸುತ್ತಾಳೆ. ಆಗ ಶ್ರೀರಾಮನು ನಾನು ಏಕಪತಿವ್ರತಸ್ಥನು ಆದ್ದರಿಂದ ನಿನ್ನನ್ನು ಮದುವೆ ಆಗಲು ಸಾಧ್ಯವಿಲ್ಲ ಎನ್ನುತ್ತಾನೆ. ಆಗ ಶೂರ್ಪನಕಿ ನಿನ್ನ ಹೆಂಡತಿ ಇದ್ದರಿಂದ ನೀನೂ ನನ್ನ ಮದುವೆ ಆಗಲು ಒಪ್ಪುತ್ತಾ ಇಲ್ಲಾ ನಿನ್ನ ಹೆಂಡತಿಯನ್ನು ನಾನು ತಿಂದು ಬಿಡುತ್ತೇನೆ ಆಗ ನೀನು ನನ್ನ ಮದುವೆ ಆಗು ಎಂದು ಹೇಳಿ ಸೀತೆಯನ್ನು ತಿನ್ನಲು ಮುಂದಾಗುತ್ತಾಳೆ ಆಗ ಲಕ್ಷ್ಮಣನು ಶೂರ್ಪನಕಿಯ ಮೂಗು ಮತ್ತು ಮೊಲೆಯನ್ನು ಕತ್ತರಿಸಿ ಹಾಕುತ್ತಾನೆ. ಶೂರ್ಪನಕಿಯು ಕೂಗುತ್ತಾ ಹೋಗಿ ಖರ ದೂಷ್ಣರೆಂಬ ರಾಕ್ಷಸರನ್ನು ಶ್ರೀರಾಮನೊಡನೆ ಯುದ್ಧಕ್ಕೆ ಕರೆತರುತ್ತಾಳೆ ಅವರುಗಳನ್ನು ರಾಮ ಲಕ್ಷ್ಮಣರು ಸಂಹರಿಸುತ್ತಾರೆ. ಶೂರ್ಪನಕಿಯು ಲಂಕಾ ಪಟ್ಟಣಕ್ಕೆ ಹೋಗಿ ಅಣ್ಣ ರಾವಣನಲ್ಲಿ ರಾಮ ಲಕ್ಷ್ಮಣರಿಂದ ತನಗಾದ ಅವಮಾನ ಇದಕ್ಕೆ ಪ್ರತಿಕಾರವಾಗಿ ಸೀತೆಯನ್ನು ಕದ್ದು ತಂದು ಸೀತೆಯನ್ನು ಅನುಭವಿಸು ಎಂದು ಹೇಳುತ್ತಾಳೆ.

ರಾವಣನಿಗೆ ರಾಮಲಕ್ಷ್ಮಣರ ಹತ್ತಿರ ಹೋಗಲು ಭಯವಾಗುತ್ತದೆ ಅದಕ್ಕಾಗಿ ರಾವಣನ ಮಾವ ಮಾರೀಚನನ್ನು ಕರೆಮ ಸೀತಾಪರಣಮಾಡಲು ಬಂಗಾರದ ಜಿಂಕೆಯಾಗಿ ಸೀತೆಯ ಹತ್ತಿರ ಸುಳಿದಾಡಿ ರಾಮನನ್ನು ದೂರ ಕರೆದುಕೊಂಡು ಹೋಗು ಎಂದು ಮಾರೀಚನಿಗೆ ಆಜ್ಞಾಪಿಸುತ್ತಾನೆ. ಅಂತೆಯೇ ಮಾರೀಚನು ಬಂಗಾರದ ಜಿಂಕೆಯ ವೇಷಹಾಕಿಕೊಂಡು ಸೀತೆಯ ಹತ್ತಿರ ಸುಳಿದಾಡುತ್ತಾನೆ. ಆಗ ಸೀತೆ ಆ ಜಿಂಕೆಯನ್ನು ಹಿಡಿದು ತರುವರತೆ ರಾಮನಲ್ಲಿ ಹೇಳುತ್ತಾಳೆ ಹಾಗೆ ಶ್ರೀರಾಮನು ಜಿಂಕೆ ಹಿಡಿಯಲು ಮುಂದಾಗುತ್ತಾನೆ ಆ ಜಿಂಕೆ ರಾಮನ ಕೈಗೆ ಸಿಗದೆ ಬಹಳ ದೂರ ಹೋಗುತ್ತದೆ ಆಗ ರಾಮ ಇದು ರಾಕ್ಷಸರ ಮಾಯಾ ಜಿಂಕೆ ಎಂದು ಅರಿತು ಬಾಣ ಬಿಟ್ಟು ಆ ಜಿಂಕೆಯನ್ನು ಸಾಯಿಸುತ್ತಾನೆ. ಆ ಜಿಂಕೆ ಪ್ರಾಣ ಬಿಡುವ ಮೊದಲು ಹಾ ಲಕ್ಷ್ಮಣ ಹಾ ಸೀತೆ ಎಂದು ಕೂಗುತ್ತದೆ ಈ ಧ್ವನಿ ಸೀತೆಗೆ

CC-O. In Public Domain. Digitized by eGangotri

ಕೇಳಿಸುತ್ತದೆ. ಆಗ ಸೀತೆ ರಾಮನಿಗೆ ಏನೋ ಆಪತ್ತು ಬಂದಿದೆ ರಾಮನನ್ನು ಹುಡುಕಿಕೊಂಡು ಬಾ ಎಂದು ಲಕ್ಷ್ಮಣನಿಗೆ ಹೇಳುತ್ತಾಳೆ . ಆಗ ಲಕ್ಷ್ಮಣ ರಾಮನಿಗೆ ಏನೂ ಆಗಿರುವುದಿಲ್ಲ ಇದು ರಾಕ್ಷಸರ ಮಾಯಾದನಿ ಶ್ರೀರಾಮ ಕ್ಷೇಮವಾಗಿ ವಾಪಸ್ಸು ಬರುತ್ತಾನೆ ಚಿಂತಿಸಬೇಡ ಎಂದು ಸೀತೆಗೆ ಸಮಾಧಾನ ಹೇಳುತ್ತಾನೆ. ಆದರೆ ಈ ಮಾತು ಕೇಳದೆ ತ್ವರಿತವಾಗಿ ರಾಮನನ್ನು ಹುಡುಕಿಕೊಂಡು ಬರುವಂತೆ ಸೀತೆ ಲಕ್ಷ್ಮಣನಿಗೆ ಆದೇಶಿಸುತ್ತಾಳೆ. ಆಗ ಲಕ್ಷ್ಮಣ ಪರ್ಣಕುಟೀರ ಎದುರು ಮೂರುಗೆರೆ ಹಾಕಿ ಈ ಗೆರೆಯಿಂದ ಏನೇ ಆದರೂ ದಾಟಿ ಹೊರಗೆ ಬರಬಾರದೆಂದು ಹೇಳಿ ರಾಮನನ್ನು ಹುಡುಕಲು ಹೋಗುತ್ತಾನೆ ಇದೇ ಸಮಯಸಾಧಿಸಿ ರಾವಣನು ಸನ್ಯಾಸಿಯ ವೇಷಧರಿಸಿ ಸೀತೆಯನ್ನು ಭಿಕ್ಷೆಹಾಕುವಂತೆ ವಿನಂತಿಸುತ್ತಾನೆ. ಆಗ ಸೀತೆಯು ಲಕ್ಷ್ಮಣನು ಹಾಕಿದ ಮೂರುಗೆರೆಯನ್ನು ದಾಟಿ ರಾವಣನಿಗೆ ಭಿಕ್ಷೆ ಹಾಕಲು ಬರುತ್ತಾಳೆ ಹಾಗೆ ಬಂದ ಸೀತೆಯನ್ನು ಬಲತ್ಕಾರವಾಗಿ ರಾವಣ ತನ್ನ ವಿಮಾನದಲ್ಲಿ ಕೂಡಿಸಿಕೊಂಡು ಲಂಕಾಪಟ್ಟಣದ ಕಡೆಗೆ ಹೋಗುತ್ತಿರುತ್ತಾನೆ. ಆಗ ಸೀತೆ ತನ್ನ ಅಸಹಾಯಕತೆಗೆ ಮರುಗುತ್ತಾ ದುಃಖಿಸುತ್ತಿದ್ದದ್ದನ್ನು ಆಕಾಶದಲ್ಲಿ ಹಾರುತ್ತಿದ್ದ ಜಟಾಯು ಎಂಬ ಹಕ್ಕಿ ನೋಡಿ ಸೀತೆಯನ್ನು ರಾವಣನಿಂದ ಬಿಡಿಸಲು ರಾವಣನೊಡನೆ ಯುದ್ಧ ಮಾಡಿ ಸೋತು ಕೆಳಗೆ ಬೀಳುತ್ತಾನೆ. ಆಗ ಸೀತೆ ತಾನು ಉಟ್ಟ ಸೀರೆಯ ಸೆರಗಿನ ಸ್ವಲ್ಪಭಾಗ ಹರಿದು ಅದರಲ್ಲಿ ತಾನು ಧರಿಸಿದ ಆಭರಣಗಳನ್ನು ಅದರಲ್ಲಿ ಗಂಟುಕಟ್ಟಿ ಆ ಜಟಾಯು ಹತ್ತಿರ ಹಾಕಿ ರಾಮನ ದರ್ಶನವಾಗದೆ ನಿನಗೆ ಮರಣ ಬರದಿರಲಿ ಎಂದು ದೇವರನ್ನು ಪ್ರಾರ್ಥಿಸುತ್ತಾಳೆ. ರಾವಣ ಸೀತೆಯನ್ನು ತನ್ನ ರಾಜಧಾನಿಯಾದ ಲಂಕಾಪಟ್ಟಣದ ಅಶೋಕ ವನ ಎಂಬ ಉದ್ಯಾನವನದಲ್ಲಿದ್ದ ಅಶೋಕ ಮರದ ಕೆಳಗೆ ಬಿಟ್ಟು ಸುತ್ತಲೂ ರಾಕ್ಷಸ ಹೆಂಗಸರ ಕಾವಲು ಹಾಕಿ ಹೋಗುತ್ತಾನೆ.

ಇತ್ತಲಾಗಿ ರಾಮನನ್ನು ಹುಡುಕಿಕೊಂಡು ಬಂದ ಲಕ್ಷ್ಮಣ ರಾಮನನ್ನು ಕಂಡು ವಿಷಯ ತಿಳಿಸುತ್ತಾನೆ. ರಾಮಲಕ್ಷ್ಮಣರು ಹಿಂತಿರುಗಿ ಬಂದು ಸೀತೆಯನ್ನು ಕಾಣದೆ ಸೀತೆಯನ್ನು ಹುಡುಕುತ್ತಾ ಜಟಾಯುವನ್ನು ಸಂಧಿಸುತ್ತಾರೆ. ರಾಮನಿಗೆ ಜಟಾಯು ನಡೆದ ಸಂಗತಿಯನ್ನು ತಿಳಿಸಿ ಮರಣವನ್ನಪ್ಪುತ್ತಾನೆ. ರಾಮಲಕ್ಷ್ಮಣರು ಜಟಾಯುವಿಗೆ ಉತ್ತರಕ್ರಿಯೆಯನ್ನು ಮಾಡಿ ಮುಗಿಸುತ್ತಾರೆ.

ಮುಂದೆ ಪಯಣಿಸುತ್ತಾ ಶಬರಿಯ ಆಶ್ರಮಕ್ಕೆ ಬರುತ್ತಾರೆ. ಶಬರಿ ಒಬ್ಬ ಮುಗ್ದ ಬೇಡರ ಹೆಣ್ಣುಮಗಳು ಮಹಾ ವಿಷ್ಣುವೇ ಶ್ರೀ ರಾಮನಾಗಿ ಅವತಾರ ಮಾಡಿ ಬಂದಿದ್ದಾನೆಂದು ಆಕೆಗೆ ತಿಳಿದಿರುತ್ತೆ. ಆಕೆ ಶ್ರೀ ರಾಮನ ಪರಮ ಭಕ್ತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದಲ್ಲ ಒಂದು ದಿನ ಶ್ರೀ ರಾಮ ತನಗೆ ಧರ್ಶನ ಕೊಡುತ್ತಾನೆಂದು ಶ್ರೀರಾಮನ ಧ್ಯಾನದಲ್ಲೇ ಕಾಲ ಖಿಳೆಯುತ್ತಿರುತ್ತಾಳೆ ಶ್ರೀ ರಾಮ ಅವಳ ಆಶ್ರಮಕ್ಕೆ ಬಂದುದರಿಂದ ತುಂಬಾ ಸಂತೋಶಗೊಂಡವಾಳಾಗಿ ಕಾಡಿನಲ್ಲಿದ್ದ ಹಣ್ಣುಗಳನ್ನು ತಂದು ಅವು ಚೆನ್ನಾಗಿದೆಯೋ ಇಲ್ಲವೋ ಎಂದು ಕಚ್ಚಿ ತಿಂದು ರುಚಿ ನೋಡಿ ರುಚಿಯಾದ ಹಣ್ಣುಗಳನ್ನು ರಾಮನಿಗೆ ಕೊಡುತ್ತಾಳೆ ರಾಮ ಸಂತೋಷದಿಂದ ಅದನ್ನು ಸ್ವೀಕರಿಸಿ ಆಕೆಗೆ ಪರಮ ಪದವಿಯನ್ನು ಅನುಗ್ರಹಿಸಿ ಸೀತೆಯನ್ನು ಅರಸುತ್ತಾ ದಕ್ಷಿಣಾಭಿಮುಖವಾಗಿ ಪ್ರಯಾಣಿಸುತ್ತಾ ವಾಲಿಯ ಕಿಷ್ಕಿಂದಕ್ಕೆ ಬರುತ್ತಾರೆ.

ಕಿಷ್ಕಿಂದಾ ಕಾಂಡ

ಕಿಷ್ಕಿಂದ ಪಟ್ಟಣದಲ್ಲಿ ವಾಲಿ ಸುಗ್ರೀವರೆಂಬ ಅಣ್ಣ ತಮ್ಮಂದಿಯರು ಇರುತ್ತಾರೆ ವಾನನರರಿಗೆ ಅಣ್ಣನಾದ ವಾಲಿಯು ರಾಜನಾಗಿರುತ್ತಾನೆ. ಒಂದು ದಿನ ದುದುಂಬಿ ಎಂಬ ರಾಕ್ಷಸು ವಾಲಿಯೊಡನೆ ಯುದ್ಧಕ್ಕೆ ಬಂದು ಸೋತು ಓಡಿಹೋಗುತ್ತಿರುವಾಗ ವಾಲಿ ಅವನನ್ನು ಅಟ್ಟಿಸಿಕೊಂಡು ಹೋಗುತ್ತಾನೆ ಆ ರಾಕ್ಷಸನು ಓಡಿ ಹೋಗಿ ಒಂದು ಗುಹೆ ಸೇರುತ್ತಾನೆ ವಾಲಿಯು ಅಲ್ಲಿಯು ಬಿಡದೆ ಗುಹೆಯೊಳಗೆ ಹೋಗಿ ಯುದ್ಧ ಮಾಡುತ್ತಿರುತ್ತಾನೆ. ಕೆಲವು ದಿನಗಳು ಕಳೆದರೂ ಯಾರೊಬ್ಬರೂ ಹೊರಗೆ ಬರುವುದಿಲ್ಲ ಇದನ್ನು ನೋಡಿದ ಸುಗ್ರೀವ ಮತ್ತು ಉಳಿದವರು ವಾಲಿಯನ್ನು ಆ ರಾಕ್ಷಸ ಕೊಂದಿರಬಹುದು ಪುನಃ ಅವನು ಹೊರಬಂದು ನಮ್ಮಗಳನ್ನೆಲ್ಲಾ ಕೊಲ್ಲುತ್ತಾನೆಂದು ತಿಳಿದು ಗುಹೆಯ ಬಾಗಲಿನಲ್ಲಿ ದೊಡ್ಡ ಬಂಡೆಯನ್ನು ಅಡ್ಡ ಇಟ್ಟು ಊರಿಗೆ ಬರುತ್ತಾರೆ. ವಾನನರು ತಮ್ಮ ಸುಗ್ರೀವನನ್ನು ರಾಜನಾಗಿ ಮಾಡುತ್ತಾರೆ.

ಗುಹೆಯ ಒಳಗಿದ್ದ ವಾಲಿ ರಾಕ್ಷಸನನ್ನು ಕೊಂದು ಗುಹೆಯ ಬಾಗಿಲಿಗೆ ಅಡ್ಡಲಾಗಿಟ್ಟಿದ್ದ ಬಂಡೆಯನ್ನು ಒದ್ದು ಹೊರಹಾಕಿ ಊರಿಗೆ ಬಂದು ಸುಗ್ರೀವನು ನನ್ನನ್ನು ಸಾಯಿಸಿ ತಾನು ರಾಜನಾಗಬೇಕೆಂದು ಗುಹೆಯ ಬಾಗಿಲಿಗೆ ಬಂಡೆಯನ್ನು ಅಡ್ಡ ಇಟ್ಟು ಬಂದು ರಾಜನಾಗಿದ್ದಾನೆಂದು ತಿಳಿದು ಸುಗ್ರೀವನನ್ನು ಹೊಡೆದು ಓಡಿಸುತ್ತಾನೆ ಅಲ್ಲಿ ಖಷ್ಯಮೂಖ ಎಂಬ ಪರ್ವತವಿತ್ತು ಅಲ್ಲಿಗೆ ಬಂದರೆ ಅವನಿಗೆ ಮರಣ ಎಂಬ ಖಷಿ ಶಾಪವಿತ್ತು ಆದ್ದರಿಂದ ಅಲ್ಲಿಗೆ ವಾಲಿ ಬರುವುದಿಲ್ಲವಲ್ಲಾವೆಂದು ತಿಳಿದು ಸುಗ್ರೀವನು ಅಲ್ಲಿ ಆ ಪರ್ವತದಲ್ಲಿ ಹನುಮಂತನೆಂಬ ಸ್ನೇಹಿತನ ಜೊತೆಯಲ್ಲಿ ವಾಸವಿದ್ದನು

ರಾಮಲಕ್ಷ್ಮಣರು ಅಲ್ಲಿಗೆ ಬರುವುದನ್ನು ನೋಡಿ ಹನುಮಂತನು ಸಣ್ಣ ಬಾಲಕನ ವೇಷದಲ್ಲಿ ರಾಮ ಲಕ್ಷ್ಮಣರ ಹತ್ತಿರ ಹೋಗಿ ರಾಮ ಲಕ್ಷ್ಮಣರ ಸಮಾಚಾರವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri
ತಿಳಿದು ಅವರನ್ನು ಸುಗ್ರೀವನ ಹತ್ತಿರ ಕರೆದು ಕೊಂಡು ಬಂದು ರಾಮಲಕ್ಷ್ಮಣರಿಗೆ ಸುಗ್ರೀವನ ಪರಿಚಯ ಮಾಡಿಸಿ ಅಣ್ಣ ವಾಲಿಯಿಂದ ಸುಗ್ರೀವನಿಗೆ ಒದಗಿದ ಕಷ್ಟವನ್ನು ವಿವರಿಸುತ್ತಾನೆ. ರಾಮ ವಾಲಿಯನ್ನು ಕೊಂದು ಸುಗ್ರೀವನಿಗೆ ಕಿಷ್ಕಿಂದೆಯ ಆಧಿಪತ್ಯವನ್ನು ಕೊಡುವುದಾಗಿಯೂ ಅದಕ್ಕೆ ಪ್ರತಿಯಾಗಿ ಸುಗ್ರೀವನು ಸೀತೆಯನ್ನು ಹುಡುಕಲು ರಾಮನಿಗೆ ಸಹಾಯ ಮಾಡುವುದಾಗಿಯೂ ಒಪ್ಪಂದವೇರ್ಪಡುತ್ತದೆ.

ಸುಗ್ರೀವನಿಗೆ ರಾಮನು ವಾಲಿಯೊಡನೆ ಯುದ್ಧಕ್ಕೆ ಹೋಗುವಂತೆ ತಿಳಿಸಿ ಸುಗ್ರೀವನನ್ನು ಅನುಸರಿಸಿ ರಾಮನು ಹೋಗುತ್ತಾನೆ ವಾಲಿ ಸುಗ್ರೀವರಿಗೆ ಘೋರವಾದ ಯುದ್ಧ ನಡೆಯುತ್ತದೆ. ಮರೆಯಲ್ಲಿ ನಿಂತ ಶ್ರೀರಾಮನು ಬಾಣಬಿಟ್ಟು ವಾಲಿಯನ್ನು ಹತ್ಯೆಮಾಡಬೇಕೆಂದು ನಿಶ್ಚಯಿಸಿರುತ್ತಾನೆ ಆದರೆ ಯುದ್ಧಮಾಡುವಾಗ ವಾಲಿ ಸುಗ್ರೀವರು ಒಂದೇ ರೀತಿ ಇದ್ದುದರಿಂದ ಇವರಲ್ಲಿ ವಾಲಿಯಾರು ಸುಗ್ರೀವನಾರು ಎಂದು ತಿಳಿಯದೆ ರಾಮ ಸುಮ್ಮನಿರುತ್ತಾನೆ ಸುಗ್ರೀವನು ಯುದ್ಧದಲ್ಲಿ ಸೋತು ಪುನಃ ಋಷ್ಯಮೂಖ ಪರ್ವತಕ್ಕೆ ಓಡಿಹೋಗುತ್ತಾನೆ. ನೆಡದ ವಿಚಾರವನ್ನು ರಾಮ ಸುಗ್ರೀವನಿಗೆ ಹೇಳಿ ಪುನಃ ವಾಲಿಯೊಡನೆ ಸುಗ್ರೀವನನ್ನು ಯುದ್ಧಕ್ಕೆ ಕಳುಹಿಸುತ್ತಾನೆ ಈಬಾರಿ ಯುದ್ಧಕ್ಕೆ ಹೋಗುವಾಗ ಸುಗ್ರೀವನು ಕುತ್ತಿಗೆಯಲ್ಲಿ ಒಂದು ಹೂವಿನ ಮಾಲೆ ಹಾಕಿಕೊಂಡು ಹೋಗುತ್ತಾನೆ. ವಾಲಿ ಸುಗ್ರೀವರಲ್ಲಿ ಭಯಂಕರ ಯುದ್ಧ ನಡೆಯುತ್ತದೆ. ರಾಮ ಮರೆಯಲ್ಲಿ ನಿಂತು ವಾಲಿಯ ಮೇಲೆ ಬಾಣ ಪ್ರಯೋಗ ಮಾಡುತ್ತಾನೆ ವಾಲಿಯು ನೆಲಕ್ಕೆ ಬೀಳುತ್ತಾನೆ ತನ್ನ ಮೇಲೆ ಬಾಣ ಪ್ರಯೋಗ ಮಾಡಿದವನು ರಾಮನೆಂದು ಅರಿತ ವಾಲಿ ರಾಮನನ್ನು ಕುರಿತು ಎಲೆ ರಾಮ ಮರೆಯಲ್ಲಿ ನಿಂತು ಏಕೆ ನನ್ನ ಮೇಲೆ ಬಾಣ ಪ್ರಯೋಗ ಮಾಡಿದೆ ನಾನು ನಿನಗೆ ಏನೂ ಅಪರಾಧ ಮಾಡಿದೆ ಎಂದು ರಾಮನನ್ನು ಮೂದಲಿಸುತ್ತಾನೆ ಆಗ ರಾಮ ಎಲೈ ವಾಲಿ ಸ್ವಂತ ಮಗಳು ತಂಗಿ ಸೊಸೆ ತಮ್ಮನ ಹೆಂಡತಿ ಎಲ್ಲರೂ ಸಮಾನರು ನೀನು ಮದದಿಂದ ನಿನ್ನ ತಮ್ಮ ಸುಗ್ರೀವನ ಹೆಂಡತಿಯನ್ನು ಬಲತ್ಕಾರವಾಗಿ ಅನುಭವಿಸಿದ್ದು ಮಹಾಪಾಪ ಇಂಥವರನ್ನು ವಿಚಾರಣೆ ಮಾಡದೆ ವಧಿಸಬೇಕೆಂದದು ಶಾಸ್ತ್ರವಿದೆ ಆದ್ದರಿಂದ ನಿನ್ನನ್ನು ಮರೆಯಲ್ಲಿ ನಿಂತು ವಧಿಸಿದ್ದು ತಪ್ಪಿಲ್ಲ ಎಂದು ರಾಮ ಹೇಳುತ್ತಾನೆ ವಾಲಿಗೂ ತನ್ನ ತಪ್ಪಿನ ಅರಿವಾಗುತ್ತದೆ ಮತ್ತು ಬಾಣಬಿಟ್ಟು ತನ್ನ ವಧೆಗೆ ಕಾರಣನಾದವನು ಜಗನ್ನಿಯಮರನಾದ ಭಗವಂತನೆಂದು ತಿಳೀದು ರಾಮನಲ್ಲಿ ಲೀನನಾಗುತ್ತಾನೆ.

ಆಗ ವಾಲಿಯ ಹೆಂಡತಿ ತಾರೆ ರಾಮನ ಹತ್ತಿರ ಬಂದು ತನ್ನನ್ನು ವಾಲಿಯನ್ನು ಸಂಹರಿಸಿದಂತೆ ನನ್ನನ್ನು ಸಂಹರಿಸಿ ವಾಲಿಯ ಸಮೀಪಕ್ಕೆ ಕಳುಹಿಸು ಎಂದು

CC-O. In Public Domain. Digitized by eGangotri

ರಾಮನಲ್ಲಿ ಹೇಳುತ್ತಾಳೆ ಆಗ ರಾಮ ವಾಲಿ ಬದುಕಿದ್ದರೆ ಅವನಿಂದ ಇಂಥ ಕೆಟ್ಟ ಕೆಲಸಗಳು

ನಡೆಯುತ್ತಿದ್ದವು ಅದಕ್ಕಾಗಿ ಆತನ ಜೀವನ ಸಮಾಪ್ತಿಯಾಯಿರು ಆದರೆ ನಿನ್ನಿಂದ ಒಳ್ಳೆಯ ಕೆಲಸಗಳು ನಡೆಯಲಿದೆ ಅದಕ್ಕಾಗಿ ದುಃಖವನ್ನು ಬಿಟ್ಟಿ ನಿನ್ನ ಮಗನೊಡನೆ ವಾಲಿಯ ಉತ್ತರ ಕ್ರಿಯೆಯನ್ನು ನಡೆಸು ಎಂದು ರಾಮ ಹೇಳುತ್ತಾನೆ. ಸುಗ್ರೀವ ಮೊದಲಾದವರು ಸೇರಿ ವಾಲಿಯ ಉತ್ತರಕ್ರಿಯೆಯನ್ನು ಮುಗಿಸುತ್ತಾರೆ. ವಾಲಿಯ ಹೆಂಡತಿ ತಾರೆಯೇ ಮುಂದೆ ನಿಂತು ಸುಗ್ರೀವನನ್ನು ರಾಜನಾಗಿಯೂ ಅಂಗದನನ್ನು ಯುವರಾಜನನ್ನಾಗಿ ಮಾಡುತ್ತಾಳೆ. ಇಪ್ಪರಲ್ಲಿ ಮಳೆಗಾಲ ಆರಂಭವಾಗುತ್ತೆ. ಮಳೆಗಾಲ ಕಳೆದೊಡನೆ ಸೀತೆಯನ್ನು ಹುಡುಕುವುದೆಂದು ನಿಶ್ಚಯಿಸಿ ಅದೇ ಋಷ್ಯಮೂಖ ಪರ್ವತದಲ್ಲಿ ಸಣ್ಣ ಗುಡಿಸಲು ಕಟ್ಟಿಕೊಂಡು ರಾಮ ಲಕ್ಷ್ಮಣರು ವಾಸ ಮಾಡುತ್ತಾ ಮಳೆಗಾಲವನ್ನು ಕಳೆಯುತ್ತಾರೆ ಮಳೆಗಾಲ ಕಳೆದೊಡನೆ ಸುಗ್ರೀವನ ಕಪಿಸೈನ್ಯ ಸೀತೆಯನ್ನು ಹುಡುಕುತ್ತಾ ನಾಲ್ಕು ದಿಕ್ಕುಗಳಿಗೂ ಹೋಗುತ್ತದೆ. ದಕ್ಷಿಣ ದಿಕ್ಕಿಗೆ ಹೊರಟ ಗುಂಪಿನಲ್ಲಿ ಹನುಮಂತ ಜಾಂಬವಂತ ಮತ್ತು ಅಂಗದರಿರುತ್ತಾರೆ. ಸೀತೆಯನ್ನು ಹುಡುಕುತ್ತಾ ಈ ಗುಂಪು ಈಗಿನ ರಾಮೇಶ್ವರಕ್ಕೆ ಬರುತ್ತದೆ. ಅಲ್ಲಿ ಜಟಾಯುವಿನ ಅಣ್ಣ ಸಂಪಾತಿ ಎಂಬ ಹಕ್ಕಿಯು ತನ್ನ ರೆಕ್ಕೆಗಳು ಸುಟ್ಟುಹೋಗಿ ಹಾರಲಾಗದೆ ಬಿದ್ದಿರುತ್ತದೆ ಈ ಕಪಿಸೇನೆಗೆ ಅದು ಹಕ್ಕಿ ಎಂದು ತಿಳಿಯುವುದಿಲ್ಲ. ಯಾವುದೋ ಬಂಡೆ ಇರಬೇಕೆಂದು ತಿಳಿದು ಅದರ ಮೇಲೆ ಕುಳಿತು ಜಟಾಯುವಿನ ಜೀವವಾದರೂ ಸಾರ್ಥಕವಾಯಿತು ಸೀತೆಯ ಹುಡುಕುವ ವಿಚಾರದಲ್ಲಿ ನಮಗೆ ಯಾವ ಫಲವು ಸಿಗಲಿಲ್ಲಾ ಎಂದು ಮಾತಾಡಿಕೊಳ್ಳುವುದನ್ನು ಆ ಹಕ್ಕಿ ತಿಳಿದು ನೀವು ಯಾರು ನನ್ನ ತಮ್ಮ ಜಟಾಯು ಏನಾದ ಎಂದು ಕೇಳಿತು. ಆಗ ವಾನರ ಸಮೂಹದಿಂದ ರಾವಣನಿಂದ ಸೀತಾಪಹರಣ ಜಟಾಯುವಿನ ಪ್ರತಿರೋಧ ಜಟಾಯುವಿನ ಮರಣ ರಾಮನಿಗೆ ಸುಗ್ರೀವನ ಸಖ್ಯ ವಾಲಿವಧೆ ಕಪಿಸೇನೆಯಿಂದ ಸೀತೆಯ ಹುಡುಕಾಟ ಇಷ್ಟೆಲ್ಲಾ ತಿಳಿಯುತ್ತೆ. ಅಯ್ಯೋ ನನ್ನ ತಮ್ಮ ಜಟಾಯು ಮರಣಿಸಿದನೆ ಎಂದು ದು:ಖಪಡುತ್ತೆ ಆಮೇಲೆ ಆ ಹಕ್ಕಿಯು ನೀವು ಒಂದು ಒಳ್ಳೆಯ ಉದ್ದೇಶದಿಂದ ಹೊರಟ್ಟಿದ್ದೀರಿ. ಸೀತಾಪಹರಣ ಮಾಡಿದ ರಾವಣನ ರಾಜ್ಯ ಮುಂದೆ ಕಾಣುವ ಸಮುದ್ರದಲ್ಲಿ ಕೆಲವು ಯೋಜನ ಹೋದಲ್ಲಿ ಸಿಗುತ್ತೆ ಎಂದು ಹೇಳುತ್ತೆ.

ಸುಂದರ ಕಾಂಡ

ಆಗ ಆ ವಾನರ ಗುಂಪಿನಲ್ಲಿ ಸಮುದ್ರ ದಾಟಲು ಯಾರು ಸಮರ್ಥರು

CC-O. In Public Domain. Digitized by eGangotri
ಎಂದು ವಿಚಾರ ನಡೆಯುತ್ತೆ. ಎಲ್ಲಾ ವಾನರರು ಮತ್ತು ಜಾಂಬವಂತನು ಹನುಮಂತನನ್ನೇ ಸಮುದ್ರ ದಾಟಿ ಸೀತೆಯನ್ನು ಹುಡುಕಿಕೊಂಡು ಬರಲು ಸಮರ್ಥನೆಮದು ತೀರ್ಮಾನಿಸಿ ಹನುಮಂತನನ್ನು ಸಮುದ್ರದಾಟಿ ಲಂಕಾ ಪಟ್ಟಣಕ್ಕೆ ಸೀತೆಯನ್ನು ಹುಡುಕಲು ಕಳುಹಿಸುತ್ತಾರೆ.

ಅದರಂತೆ ಹನುಮಂತ ಸಮುದ್ರಕ್ಕೆ ಹಾರಿ ಈಜಿ ಸಂಜೆಯ ಸಮಯದಲ್ಲಿ ಲಂಕಾ ಪಟ್ಟಣಕ್ಕೆ ಬರುತ್ತಾನೆ ಅಲ್ಲಿ ಲಂಕಿಣಿ ಎಂಬ ರಾಕ್ಷಸಿಯು ಹನುಮಂತನನ್ನು ತಡೆಯುತ್ತಾಳೆ ಹನುಮಂತನು ಅವಳನ್ನು ಸಂಹರಿಸುತ್ತಾನೆ ಸೀತೆಯನ್ನು ಹುಡುಕುತ್ತಾ ರಾವಣನ ಅರಮನೆಗೆ ಬರುತ್ತಾನೆ ಹೆಂಡತಿ ಮಂಡೋದರಿಯೊಡನೆ ಮಲಗಿದ ರಾವಣನನ್ನು ನೋಡಿ ಮಂಡೋದರಿಯೋ ಸೀತೆಯೋ ಎಂದು ಅನುಮಾನ ಪಡುತ್ತಾನೆ ಮಂಡೋದರಿಯಲ್ಲಿ ಹತ್ತಿರದಲ್ಲಿ ಒದಗಬಹುದಾದ ವೈಧವ್ಯದ ಲಕ್ಷಣಗಳನ್ನು ಕಂಡು ಇವಳು ಸೀತೆಯಲ್ಲವೆಂದು ತೀರ್ಮಾನಿಸಿ ಸೀತೆಯನ್ನು ಹುಡುಕುತ್ತಾ ಅಶೋಕವನ ಎಂಬ ಒಂದು ಉದ್ಯಾನವನಕ್ಕೆ ಬರುತ್ತಾನೆ. ಅಲ್ಲಿ ಒಂದು ಮರದ ಬುಡದಲ್ಲಿ ಭಯಂಕರ ರಾಕ್ಷಸ ಸ್ತ್ರೀಯರ ಕಾವಲಿನಲ್ಲಿ ಇರುವ ಸೀತಾ ಮಾತೆಯನ್ನು ಕಾಣುತ್ತಾನೆ. ಹಾಗೆಯೇ ಹತ್ತಿರವಿದ್ದ ಒಂದು ಮರವೇರಿ ಕುಳಿತುಕೊಳ್ಳುತ್ತಾನೆ ಅಷ್ಟರಲ್ಲಿ ರಾವಣನು ಕೆಲವು ಜನ ಆಪ್ತರೊಡನೆ ಸೀತೆ ಹತ್ತಿರ ಆಗಮಿಸಿ ಸೀತೆಯನ್ನು ತನ್ನವಳಾಗಬೇಕೆಂದು ಇಲ್ಲದಿದ್ದರೆ ನಾಶಮಾಡುವುದಾಗಿಯೂ ಬೆದರಿಸುತ್ತಾನೆ ಸೀತೆಯು ರಾವಣನ ಮುಖವನ್ನು ನೋಡದೆ ಹತ್ತಿರವಿದ್ದ ಒಂದು ಹುಲ್ಲು ಕಡ್ಡಿಗೆ ಹೇಳುತ್ತಾಳೆ ಎಲೈ ಹುಲ್ಲು ಕಡ್ಡಿಯೇ ಈ ರಾವಣನಿಗೆ ಹೇಳು ನಾನು ರಾಮನನ್ನು ಬಿಟ್ಟು ಬೇರೆ ಯಾರನ್ನೂ ಮನಸ್ಸಿನಲ್ಲಿಯೂ ಯೋಚಿಸುವವಳಲ್ಲಾ ಈ ರಾವಣ ನನ್ನನ್ನು ನಾಶ ಮಾಡುವುದಾದರೆ ಮಾಡಲಿ ಎಂದು ಹೇಳುತ್ತಾಳೆ ಆಗ ಭಯಂಕರ ಸಿಟ್ಟು ರಾವಣನಿಗೆ ಬರುತ್ತೆ. ಇನ್ನು ಒಂದು ತಿಂಗಳೊಳಗಾಗಿ ಸೀತೆ ತನ್ನವಳಾಗದೆ ಇದ್ದಲ್ಲಿ ಸೀತೆಯನ್ನು ನಾಶಮಾಡುವುದಾಗಿ ಎಚ್ಚರಿಸಿ ಹೋಗುತ್ತಾನೆ. ಸೀತೆಗೆ ಬಹಳ ದುಃಖವಾಗುತ್ತೆ. ರಾಮ ತನ್ನನ್ನು ಹುಡುಕಿಕೊಂಡು ಬರುತ್ತಾನೆ ಎಂದು ಬಹಳ ಆಸೆ ಇಟ್ಟುಕೊಂಡಿದ್ದಳು ಇಷ್ಟುದಿನವಾದರೂ ರಾಮ ಬರದೇ ಇದ್ದುದ್ದರಿಂದ ರಾಮ ತನ್ನನ್ನು ಹುಡುಕಿಕೊಂಡು ಬರಲಾರನೆಂದು ತಿಳಿದು ತನ್ನ ತಲೆ ಕೂದಲನ್ನೆ ಕುತ್ತಿಗೆಗೆ ಗಂಟು ಹಾಕಿಕೊಂಡು ಆತ್ಮ ಹತ್ಯೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸುತ್ತಾಳೆ ಆಗ ಮರದ ಮೇಲೆ ಕುಳಿತ ಹನುಮಂತ ರಾಮನ ಜನನದಿಂದ ಮೊದಲ್ಗೊಂಡು ಸೀತಾಪಹರಣ ಜಟಾಯುವಿನ ಪ್ರತಿರೋಧದಿಂದ ಜಟಾಯುವಿನ ಮರಣ ರಾಮ ಸುಗ್ರೀವನ ಸಖ್ಯ ವಾಲಿಯ ಮರಣ ಇತ್ಯಾದಿ ಕಥೆಯನ್ನು

CC-O. In Public Domain. Digitized by eGangotri

ಸುಶ್ರಾವ್ಯವಾಗಿ ಹೇಳುತ್ತಾನೆ. ಸೀತೆ ತಲೆಯೆತ್ತಿ ಆ ಕಪಿಯನ್ನು ನೋಡುತ್ತಾಳೆ ಆಗ ಹನುಮಂತ ಸೀತೆಯ ಎದುರು ನಿಂತು ಸೀತೆಗೆ ನಮಿಸಿ ನಾನು ರಾಮನ ದೂತ ಹನುಮಂತನೆಂದು ಹೇಳುತ್ತಾನೆ ರಾಮ ಮತ್ತು ಸೀತೆ ಇಬ್ಬರಿಗೆ ಮಾತ್ರ ಗೊತ್ತಿದ್ದ ಕಾಕಾಸುರನ ವಧೆಯನ್ನು ಇವನು ರಾಮದೂತನೆಂದು ಸೀತೆಗೆ ನಂಬಿಕೆಯಾಗಲೆಂದು ಹೇಳಿದ್ದ ಕಥೆಯನ್ನು ಹೇಳುತ್ತಾನೆ ರಾಮನು ಕೊಟ್ಟ ಉಂಗುರವನ್ನು ಸೀತೆಗೆ ಕೊಡುತ್ತಾನೆ ಮುಂದೆ ಶ್ರೀರಾಮನು ಕಪಿಸೈನ್ಯದೊಡನೆ ಲಂಕಾಪಟ್ಟಣಕ್ಕೆ ಆಗಮಿಸಿ ರಾವಣನನ್ನು ಕೊಂದು ಸೀತೆಯನ್ನು ಕರೆದುಕೊಂಡು ಹೋಗುವುದಾಗಿ ತಿಳಿಸುತ್ತಾನೆ ಮತ್ತು ಸೀತೆ ಕೊಟ್ಟ ಚೂಡಾಮಣಿ ಎಂಬ ಆಭರಣವನ್ನು ತೆಗೆದುಕೊಂಡು ಸೀತೆಗೆ ಹೇಳಿ ಅಲ್ಲಿಂದ ಹೊರಟು ಪುಷ್ಪ ಮತ್ತು ಫಲಭರಿತ ಅಶೋಕವನವನ್ನು ಹಾಳುಮಾಡುತ್ತಾನೆ ಇದನ್ನು ಕಂಡ ಅಶೋಕವನದ ಕಾವಲುಗಾರರು ಹನುಮಂತನ ಮೇಲೆ ಆಕ್ರಮಣ ಮಾಡುತ್ತಾರೆ ಅವರನ್ನೆಲ್ಲ ಹನುಮಂತ ಕೊಂದು ಹಾಕುತ್ತಾನೆ ಈ ಸುದ್ದಿ ರಾವಣನಿಗೆ ತಿಳಿಯುತ್ತೆ ರಾವಣ ಹನುಮಂತತನನ್ನು ಹಿಡಿದು ತರುವಂತೆ ಹೇಳಿ ಮತ್ತಷ್ಟು ಸೈನಿಕರನ್ನು ಕಳುಹಿಸುತ್ತಾನೆ. ಅವರೆಲ್ಲರನ್ನು ಹನುಮಂತ ನಾಶಮಾಡುತ್ತಾನೆ ಈ ವಿಚಾರ ರಾವಣನ ಮಗನಾದ ಇಂದ್ರಜಿತ್ ನಿಗೆ ತಿಳಿಯುತ್ತದೆ. ಅವನು ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿ ರಾವಣನ ಎದುರು ನಿಲ್ಲಿಸುತ್ತಾನೆ. ರಾವಣ ಹನುಮಂತನನ್ನು ಕುರಿತು ನೀನು ಯಾರು ಯಾಕೆ ನನ್ನ ಈ ಅಶೋಕವನವನ್ನು ನಾಶ ಮಾಡಿದೆ ಎಂದು ಕೇಳುತ್ತಾನೆ. ಆಗ ಹನುಮಂತ ನಾನು ಅಯೋಧ್ಯಾಧಿಪತಿಯಾಗಿರುವ ರಾಮನ ದೂತನು ಕಪಟವೇಷದಿಂದ ರಾಮನ ಹೆಂಡತಿಯಾದ ಸೀತಾದೇವಿಯನ್ನು ಕದ್ದು ತಂದು ಇಟ್ಟಿರುವಿ ನಿನಗೆ ಎರಡು ಮಾತನ್ನು ಹೇಳುವುದಕ್ಕಾಗಿ ನಾನು ಬಂದವನು ಎಲೈ ರಾವಣನೇ ಸೀತಾದೇವಿಯನ್ನು ಶ್ರೀರಾಮನಿಗೆ ಒಪ್ಪಿಸಿ ಶ್ರೀರಾಮನಲ್ಲಿ ಕ್ಷಮೆಯನ್ನು ಯಾಚಿಸದಿದ್ದರೆ ಶ್ರೀರಾಮನು ಕಪಿಸೈನ್ಯದೊಂದಿಗೆ ಆಗಮಿಸಿ ನಿನ್ನ ಸಂಹಾರ ಮಾಡುವನು ಎಂದು ಹೇಳಿದನು. ಇದನ್ನು ಕೇಳಿದ ರಾವಣನು ಹನುಮಂತನನ್ನು ಕೊಲ್ಲುವಂತೆ ತನ್ನವರಿಗೆ ತಿಳಿಸಿದನು. ಅಲ್ಲಿದ್ದ ರಾವಣನ ಮಂತ್ರಿ ಪ್ರಹಸನೆನ್ನುವವನು ಇವನು ರಾಮನ ದೂತ ದೂತನನ್ನು ಕೊಲ್ಲಬಾರದು ಎಂದು ಹೇಳುತ್ತಾನೆ. ರಾವಣ ಈ ಕಪಿಯು ಅಶೋಕವನವನ್ನೆಲ್ಲಾ ಹಾಳು ಮಾಡಿದ್ದಾನೆ ಇವನ ಬಾಲಕ್ಕೆ ಬಟ್ಟೆ ಸುತ್ತಿ ಎಣ್ಣೆ ಹೊಯ್ದು ಬೆಂಕಿ ಹಚ್ಚಿ ಬಿಡೋಣಾ ಎಂದು ಹೇಳಿ ಬಾಲಕ್ಕೆ ಬಟ್ಟಿ ಸುತ್ತಲು ಸೇವಕರಿಗೆ ಆಜ್ಞಾಪಿಸುತ್ತಾನೆ ಸೇವಕರು ಊರಿನಲ್ಲಿದ್ದದ ಎಲ್ಲಾ ಬಟ್ಟೆಗಳನ್ನು ತಂದು ಸುತ್ತಿದರೂ ಬಟ್ಟೆ ಸಾಕಾಗುತ್ತಿರಲಿಲ್ಲಾ ಕಾರಣ ಹನುಮಂತನ ಬಾಲ ಉದ್ದವಾಗುತ್ತಾ ಹೋಗುತ್ತದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ಎಲ್ಲೂ ಬಟ್ಟೆ ಸಿಗದಿದ್ದಾಗ ರಾವಣನು ಸೀತೆಯು ಉಟ್ಟ ಸೀರೆಯನ್ನು ಬಿಚ್ಚಿ ಅದನ್ನು ಬಾಲಕ್ಕೆ ಸುತ್ತೋಣಾ ಅನ್ನುತ್ತಾನೆ ಆಗ ಬಾಲವು ಸ್ವಲ್ಪ ಚಿಕ್ಕದಾಗುತ್ತದೆ. ಆಮೇಲೆ ಡಬ್ಬಗಟ್ಟಲೆ ಎಣ್ಣೆ ತಂದು ಬಾಲದ ಮೇಲೆ ಹೊಯ್ದು ಬಾಲಕ್ಕೆ ಬೆಂಕಿ ಹಚ್ಚುತ್ತಾರೆ. ಬೆಂಕಿ ಹಚ್ಚಿದೊಡನೆ ಹನುಮಂತ ಲಂಕಾಪಟ್ಟಣವನ್ನು ತನ್ನ ಬಾಲಕ್ಕೆ ಹಿಡಿದ ಬೆಂಕಿಯಿಂದ ಸುಟ್ಟು ಬಾಲವನ್ನು ಸಮುದ್ರದಲ್ಲಿ ಮುಳುಗಿಸಿ ಬಾಲಕ್ಕೆ ಬಿದ್ದ ಬೆಂಕಿಯನ್ನು ಆರಿಸಿ ಪುನಃ ಸಮುದ್ರವನ್ನು ದಾಟಿ ಕಪಿಸೈನ್ಯ ಸೇರಿ ಕಪಿಸೈನ್ಯದೊಡನೆ ಕೂಡಿಕೊಂಡವನಾಗಿ ರಾಮ ಸುಗ್ರೀವರ ಹತ್ತಿರ ಬಂದು ನಡೆದ ವೃತ್ತಾಂತವನ್ನು ಹೇಳಿ ಸೀತೆ ಕೊಟ್ಟ ಚೂಡಾಮಣಿ ಆಭರಣವನ್ನು ರಾಮನಿಗೆ ಕೊಡುತ್ತಾನೆ. ಇದರಿಂದ ರಾಮನಿಗೆ ತುಂಬಾ ಸಂತೋಷವಾಗುತ್ತದೆ ಹನುಮಂತನನ್ನು ಆಲಂಗಿಸಿಕೊಂಡು ಕಣ್ಣೀರು ಸುರಿಸುತ್ತಾನೆ.

ಯುದ್ಧ ಕಾಂಡ

ರಾಮ ಲಕ್ಷ್ಮಣ ಸುಗ್ರೀವ ಹನುಮಂತ ಜಾಂಬವಂತ ಎಲ್ಲರು ಕುಳಿತು ಲಂಕಾಪಟ್ಟಣಕ್ಕೆ ಸಮುದ್ರ ದಾಟಿ ಕಪಿಸೈನ್ಯ ಸಾಗಿಸುವುದು ಹೇಗೆ ಇತ್ಯಾದಿ ಬಗ್ಗೆ ಚರ್ಚಿಸಿ ಕಪಿಸೈನ್ಯವನ್ನು ಕರೆದುಕೊಂಡು ಸಮುದ್ರದವರೆಗೆ ಹೋಗುತ್ತಾರೆ ಸಮುದ್ರರಾಜನ ಅಪ್ಪಣೆ ಪಡೆದು ಸಮುದ್ರಕ್ಕೆ ದೊಡ್ಡ ಬಂಡೆ ಮತ್ತು ಪರ್ವತಗಳನ್ನು ತಂದು ಹಾಕಿ ಸಮುದ್ರಕ್ಕೆ ಸೇತುವೆ ಕಟ್ಟಿ ಲಂಕಾಪಟ್ಟಣಕ್ಕೆ ಕಪಿಸೈನ್ಯ ಸಾಗಿಸಿ ಲಂಕಾ ಪಟ್ಟಣದ ಒಂದು ಪ್ರದೇಶದಲ್ಲಿ ಬೀಡುಬಿಡುತ್ತಾರೆ. ರಾಮನಿಗೆ ಸೀತೆಯನ್ನು ಒಪ್ಪಿಸು ನಮ್ಮ ರಾಮನ ಬಾಣಗಳಿಂದ ರಾಕ್ಷಸ ಕುಲವನ್ನು ಉಳಿಸು ಎಂದು ರಾವಣನಿಗೆ ಬುದ್ಧಿ ಹೇಳಿದ ರಾವಣ ತಮ್ಮ ವಿಭೀಷಣನನ್ನು ರಾವಣ ರಾಜ್ಯದಿಂದ ಹೊರಗೆ ಹಾಕುತ್ತಾನೆ ಹಾಗೆ ಹೊರಗೆ ಹಾಕಲ್ಪಟ್ಟ ವಿಭೀಷಣ ನನ್ನು ರಾಮ ಮೊದಲು ಸಂಶಯದಿಂದ ನೋಡಿ ಆನಂತರ ತಮ್ಮ ಪಾಳೆಯಕ್ಕೆ ಸೇರಿಸಿಕೊಳ್ಳುತ್ತಾನೆ. ಆನಂತರ ವಾಲಿಯ ಮಗನಾದ ಅಂಗದನ್ನು ರಾವಣನಲ್ಲಿಗೆ ಯುದ್ಧ ಬೇಡ ಸೀತಾಮಾತೆಯನ್ನು ರಾಮನಿಗೆ ತಂದೊಪ್ಪಿಸುವಂತೆ ತಿಳಿಸಲು ರಾಮನು ಕಳುಹಿಸುತ್ತಾನೆ ಆದರೆ ರಾವಣ ಅಂಗದನ ಮಾತನ್ನು ಕೇಳಿ ಕೋಪಗೊಂಡು ಅಂಗದನನ್ನು ಕೊಲ್ಲುವಂತೆ ತನ್ನ ದೂತರಿಗೆ ಅಪ್ಪಣೆ ಮಾಡುತ್ತಾನೆ ಹಾಗೆ ರಾವಣನ ದೂತರು ಗಟ್ಟಿಯಾಗಿ ಅಂಗದನನ್ನು ಹಿಡಿದುಕೊಳ್ಳುತ್ತಾರೆ ಆಗ ಅಂಗದ ಹಿಡಿದುಕೊಂಡಿದ್ದ ರಾವಣನ ಸೇವಕರ ಸಮೇತನಾಗಿ ಆಕಾಶಕ್ಕೆ ಹಾರಿ ದಾರಿಯಲ್ಲಿ ಅನೇಕರನ್ನು ಕೊಡವಿ ರಾಮನ ಹತ್ತಿರ ಬಂದು ನಡೆದ ವಿಚಾರ ತಿಳಿಸುತ್ತಾನೆ.

ರಾವಣನ ರಾಕ್ಷಸ ಸೈನ್ಯಕ್ಕೂ ಸುಗ್ರೀವನ ಕಪಿಸೈನ್ಯಕ್ಕೂ ಯುದ್ಧ ಆರಂಭವಾಗುತ್ತೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯುದ್ಧದಲ್ಲಿ ರಾವಣನ ರಾಕ್ಷಸ ಸೈನ್ಯಕ್ಕೆ ಬಹಳ ಹಾನಿಯಾಗುತ್ತೆ ಇದನ್ನು ತಿಳಿದ ರಾವಣನು ತನ್ನ ತಮ್ಮನಾದ ಕುಂಭಕರ್ಣನನ್ನು ಯುದ್ಧಕ್ಕೆ ಕಳುಹಿಸಲು ಯೋಚಿಸುತ್ತಾನೆ. ಆದರೆ ಆ ಕುಂಭಕರ್ಣನಿಗೆ ಆರು ತಿಂಗಳು ಪೂರ್ತಿಯಾಗಿ ಊಟ ಮತ್ತು ಆರು ತಿಂಗಳು ಪೂರ್ತಿಯಾಗಿ ನಿದ್ದೆ ಇದು ಅವನು ಬ್ರಹ್ಮನಿಂದ ಪಡೆದ ವರ. ಈಗ ಆ ಕುಂಭಕರ್ಣನು ನಿದ್ದೆ ಮಾಡುತ್ತಿರುತ್ತಾನೆ ಅವನನ್ನು ಎಬ್ಬಿಸಲು ರಾಕ್ಷಸರೆಲ್ಲಾ ದೊಡ್ಡ ದೊಡ್ಡ ಭೇರಿಗಳನ್ನು ಭಾರಿಸುತ್ತಾರೆ. ಕೊಂಬು ಕಹಳೆಗಳನ್ನು ಊದುತ್ತಾರೆ ನೂರಾರು ಬಿಂದಿಗೆ ನೀರನ್ನು ಅವನ ಮೇಲೆ ಹೊಯ್ಯುತ್ತಾರೆ ರಾಕ್ಷಸರೆಲ್ಲಾ ಅವನ ಮೇಲೆ ಕುಣಿದು ಕುಪ್ಪಳಿಸುತ್ತಾರೆ ಆದರೂ ಆ ಕುಂಭಕರ್ಣನಿಗೆ ಎಚ್ಚರವಾಗಲಿಲ್ಲ ಆಗ ರಾವಣ ಬ್ರಹ್ಮ ದೇವರ ಹತ್ತಿರ ಕುಂಭಕರ್ಣನನ್ನು ಎಚ್ಚರಗೊಳಿಸುವಂತೆ ಪ್ರಾರ್ಥಿಸುತ್ತಾನೆ ಹಾಗೆ ಬ್ರಹ್ಮದೇವರ ಅನುಗ್ರಹದಿಂದ ಕುಂಭಕರ್ಣನಿಗೆ ಎಚ್ಚರವಾಗುತ್ತೆ. ಎಚ್ಚರವಾದೊಡನೆ ಅಣ್ಣ ಹಸಿವು ತಿನ್ನಲು ಏನಾದರೂ ಕೊಡು ಎಂದು ಕೇಳುತ್ತಾನೆ. ರಾವಣ ನಮ್ಮ ಲಂಕಾಪಟ್ಟಣಕ್ಕೆ ಶ್ರೀರಾಮನ ಕಪಿಸೈನ್ಯ ಮುತ್ತಿಗೆ ಹಾಕಿದೆ. ಆ ಕಪಿ ಸೈನ್ಯವನ್ನೆ ತಿನ್ನು ಎಂದು ರಾವಣ ಹೇಳುತ್ತಾನೆ. ಅದರಂತೆ ಕುಂಭಕರ್ಣನು ಯುದ್ಧ ಭೂಮಿಗೆ ಹೋಗಿ ಕಪಿಗಳನ್ನು ತಿನ್ನಲು ಆರಂಭಿಸುತ್ತಾನೆ ಆಗ ರಾಮಲಕ್ಷ್ಮಣರು ಕುಂಭಕರ್ಣನನ್ನು ಬಾಣ ಬಿಟ್ಟು ಸಾಯಿಸುತ್ತಾರೆ ಆನಂತರ ರಾವಣನ ಮಗನಾದ ಅಕ್ಷಯ ಕುಮಾರ ಯುದ್ಧಕ್ಕೆ ಬಂದು ಯುದ್ಧದಲ್ಲಿ ಮರಣವನ್ನು ಅಪ್ಪುತ್ತಾನೆ. ಇದರಿಂದ ಕೆರಳಿದ ರಾವಣನು ತನ್ನ ಹಿರಿಯ ಮಗನಾದ ಇಂದ್ರಜಿತನನ್ನು ಯುದ್ಧಕ್ಕೆ ಕಳುಹಿಸುತ್ತಾನೆ. ಇಂದ್ರಜಿತನಿಗೂ ಲಕ್ಷ್ಮಣನಿಗೂ ಭಯಂಕರ ಯುದ್ಧ ನಡೆಯುತ್ತೆ. ಆ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆ ಹೋಗುತ್ತಾನೆ. ಮೂರ್ಛೆ ಹೋದ ಲಕ್ಷ್ಮಣನನ್ನು ಪುನಶ್ಚೇತನಗೊಳಿಸಲು ಬೇಕಾದ ಗಿಡಮೂಲಿಕೆ ಔಷಧವನ್ನು ಕಪಿಶ್ರೇಷ್ಠನಾದ ಸುಶೇಷಣನ ಅಣತಿಯಂತೆ ಹನುಮಂತನು ಚಂದ್ರದ್ರೋಣಪರ್ವತಕ್ಕೆ ಹೋಗಿ ಗಿಡಮೂಲಿಕೆ ಸಿಗದಿರಲು ಆ ಚಂದ್ರದ್ರೋಣ ಪರ್ವತದ ಒಂದು ಭಾಗವನ್ನೇ ಕಿತ್ತುತಂದು ಸುಶೇಷಣನ ಮುಂದೆ ಇಡುತ್ತಾನೆ ಅದರಲ್ಲಿನ ಸಂಜೀವಿನಿ ಮೂಲಿಕೆಯಿಂದ ಔಷಧಿ ಮಾಡಿ ಲಕ್ಷ್ಮಣನನ್ನು ಎಚ್ಚರಿಸುತ್ತಾನೆ ಸುಶೇಷಣನಿಂದ ಎಚ್ಚರಗೊಂಡ ಲಕ್ಷ್ಮಣ ಇಂದ್ರಜಿತನೊಡನೆ ಯುದ್ಧಮಾಡಿ ಇಂದ್ರಜಿತನನ್ನು ಸಂಹರಿಸುತ್ತಾನೆ. ಅನಂತರ ರಾಕ್ಷಸ ಸೈನ್ಯಕ್ಕೂ ಕಪಿಸೈನ್ಯಕ್ಕೂ ಘೋರವಾದ ಯುದ್ಧ ನಡೆಯುತ್ತದೆ ಕಪಿಗಳು ದೊಡ್ಡ ಮರಗಳನ್ನೇ ಕಿತ್ತು ತಂದು ಅದರಿಂದ ರಾಕ್ಷಸ ಸೈನ್ಯದ ಮೇಲೆ ಹಲ್ಲೆ ನಡೆಸಿ ರಾಕ್ಷಸ ಸೈನ್ಯವನ್ನು ನಾಶ ಮಾಡುತ್ತಾರೆ. ಇದರಿಂದ ಸಿಟ್ಟುಗೊಂಡ ರಾವಣ ರಾಮಲಕ್ಷ್ಮಣರೊಡನೆ ಯುದ್ಧ ಮಾಡಿ ಮರಣವನ್ನಪ್ಪುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಭೀಷಣ ಮುಂತಾದ ರಾಮಭಕ್ತರು ಸೀತೆಯನ್ನು ಕರೆ ತಂದು ರಾಮನಿಗೆ ಒಪ್ಪಿಸುತ್ತಾರೆ ಸುಮಾರು ದಿನ ರಾವಣನಿಂದ ದೂರವಾಗಿರುವುದರಿಂದ ಸೀತೆ ಅಪವಿತ್ರಳಾಗಿರಬಹುದೆಂಬ ಸಂದೇಹ ಜನಗಳಲ್ಲಿ ಕಾಣಿಸಬಹುದೆಂದು ತೀರ್ಮಾನಿಸಿ ರಾಮ ಕಪಿಗಳಿಗೆ ಅಗ್ನಿಕುಂಡ ತಯಾರು ಮಾಡುವಂತೆ ಆದೇಶಿಸುತ್ತಾನೆ ಅದರಂತೆ ಕಪಿಗಳು ಅಗ್ನಿಕುಂಡವನ್ನು ತಯಾರು ಮಾಡುತ್ತಾರೆ. ರಾಮನ ಅಣತಿಯಂತೆ ಸೀತೆ ಅಗ್ನಿಕುಂಡಕ್ಕೆ ಹಾರುತ್ತಾಳೆ. ಅಗ್ನಿಯಲ್ಲಿ ಎಷ್ಟು ಹೊತ್ತು ಕಳೆದರೂ ಸೀತೆಯನ್ನು ಅದು ಸುಡುವುದಿಲ್ಲ. ಸೀತೆ ಪವಿತ್ರಳೆಂದು ಎಲ್ಲರಿಗೂ ಸಂತೋಷವಾಗುತ್ತೆ. ಅನಂತರ ಲಂಕಾಪಟ್ಟಣಕ್ಕೆ ವಿಭೀಷಣನನ್ನು ಪಟ್ಟಾಭಿಷಕ್ತನನ್ನಾಗಿ ಮಾಡಿ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ರಾಮಲಕ್ಷ್ಮಣರು ಹೋಗುತ್ತಾರೆ. ಅಯೋಧ್ಯೆಯ ಜನರು ರಾಮ ಸೀತೆ ಲಕ್ಷ್ಮಣರನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆ

ವಸಿಷ್ಠರಾದಿ ಪುರೋಹಿತರು ಶುಭದಿನದಂದು ಶ್ರೀರಾಮನಿಗೆ ಪಟ್ಟಾಭಿಷೇಕಕ್ಕೆ ಮೂಹೂರ್ತ ನಿಗಧಿಪಡಿಸುತ್ತಾರೆ. ಭೂಮಂಡಲದ ಸಮಸ್ತರಾಜರು ಮತ್ತು ಪ್ರಜೆಗಳನ್ನು ಮತ್ತು ಸೀತಾನ್ವೇಷಣೆಗಾಗಿ ಸಹಾಯ ಮಾಡಿದ ಸುಗ್ರೀವಾದಿ ಕಪಿಸೇನೆಯನ್ನು ಆಹ್ವಾನಿಸುತ್ತಾರೆ. ಅತಿ ವಿಜೃಂಭಣೆಯಿಂದ ಪಟ್ಟಾಭಿಷೇಕ ಮಹೋತ್ಸವ ನಡೆಯುತ್ತದೆ. ಆಗಮಿಸಿದ್ದ ಪ್ರತಿಯೊಬ್ಬ ವ್ಯಕ್ತಿಗೂ ಅನ್ನಸಂತರ್ಪಣೆ ನಡೆಯುತ್ತೆ. ಮತ್ತು ಪ್ರತಿಯೊಬ್ಬ ವ್ಯಕ್ತಿಗೂ ಸನ್ಮಾನ ನಡೆಯುತ್ತದೆ. ಯಚಕವೃಂದ ಸಂತುಷ್ಟಗೊಳ್ಳುತ್ತದೆ ಕಾಲಕ್ಕೆ ಸರಿಯಾಗಿ ಮಳೆಬೆಳೆಯಾಗಿ ದೇಶ ಶಾಂತಿಯಿಂದ ಕೂಡಿರುತ್ತದೆ.

ಉತ್ತರಕಾಂಡ

ಹೀಗಿರುವಾಗ ಶ್ರೀ ರಾಮನಿಗೆ ತನ್ನ ರಾಜ್ಯಭಾರದ ಬಗ್ಗೆ ಜನಗಳ ಅಬಿಪ್ರಾಯ ಹೇಗಿದೆ ಎಂದು ತಿಳಿಯಲು ಗೂಡಾಚಾರರನ್ನು ರಾಜ್ಯದ ಎಲ್ಲೆಡೆ ಕಳುಹಿಸುತ್ತಾನೆ. ಹಾಗೆ ಹೋಗಿರುವ ಗೂಡಾಚಾರರು ರಾಮನ ರಾಜ್ಯಬಾರದ ಬಗ್ಗೆ ಎಲ್ಲಾ ಜನರಿಂದ ಒಳ್ಳೆಯ ಅಭಿಪ್ರಾಯವಿದೆಯೆಂದು ಹೇಳುತ್ತಾರೆ. ಆದರೆ ಇದೇ ನಗರದ ಅಗಸನೊಬ್ಬನು ಒಂದು ವರುಷ ಶತ್ರುವಾದ ರಾವಣನ ವಷದಲ್ಲಿದ್ದ ಸೀತೆಯನ್ನು ಪುನ: ರಾಮ ಸ್ವೀಕರಿಸುವುದು ದರ್ಮ ಬಾಹಿರ ಎಂದು ಹೇಳಿದ್ದನ್ನು ಇದೇ ಗೂಡಾಚಾರರು ರಾಮನಿಗೆ ಹೇಳುತ್ತಾರೆ. ಆಗ ರಾಮ ಸೀತೆಯೊಡನೆ ಈ ವಿಚಾರ ತಿಳಿಸುತ್ತಾನೆ. ಆಗ ಸೀತೆ ಗರ್ಬಿಣಿಯಾಗಿರುತ್ತಾಳೆ ಆದರೂ ಅಗಸ ಆಡಿದ ಮಾತು ರಾಮನಿಗೆ ಒಂದು ಕಳಂಕ ಎಂದು ತಿಳಿದು ತನ್ನನ್ನು ಕಾಡಿಗೆ ಬಿಟ್ಟು ಬರಲು ತಿಳಿಸುತ್ತಾಳೆ. ಅದರಂತೆ ಲಕ್ಷ್ಮಣ ಸೀತೆಯನ್ನು ಕಾಡಿಗೆ ಬಿಟ್ಟು ಬರುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಲ್ಲಿಯೇ ಇದ್ದ ವಾಲ್ಮೀಕಿ ಮುನಿಗಳು ಸೀತೆಯನ್ನು ಕರೆದುಕೊಂಡು ತಮ್ಮ ಆಶ್ರಮಕ್ಕೆ ಹೋಗುತ್ತಾರೆ. ಒಂಬತ್ತು ತಿಂಗಳು ಕಳೆದು ಸೀತೆ ಅವಳಿಗಂಡು ಮಕ್ಕಳಿಗೆ ಜನ್ಮ ನೀಡುತ್ತಾಳೆ. ವಾಲ್ಮೀಕಿ ಮಹರ್ಷಿಗಳು ಆ ಶಿಶುಗಳಿಗೆ ಜಾತಕರ್ಮ ನಾಮಕರ್ಮ ಎಲ್ಲಾ ಶಾಸ್ತ್ರೋಕ್ತವಾಗಿ ಮಾಡಿ ಲವ ಕುಶ ರೆಂದು ಹೆಸರಿಡುತ್ತಾರೆ. ಅಮಕ್ಕಳು ಹುಣ್ಣಿಮೆ ಚಂದ್ರರಂತೆ ಬೆಳೆಯುತ್ತಾ ಇರುತ್ತಾರೆ. ವಾಲ್ಮೀಕಿ ಮಹರ್ಷಿಗಳು ಕ್ಷತ್ರಿಯರಿಗೆ ಬೇಕಾದ ಧರ್ನುವಿದ್ಯೆ ಮುಂತಾದುವುಗಳನ್ನು ಈ ಮಕ್ಕಳಿಗೆ ಕಲಿಸುತ್ತಾರೆ.

ಹೀಗಿರಲು ಅಯೋಧ್ಯೆಯಲ್ಲಿ ಶ್ರೀ ರಾಮನು ಆಶ್ವಮೇದ ಯಾಗವನ್ನು ಮಾಡಲು ಆರಂಭಿಸಿ ಶತ್ರುಘ್ನನನ ನೇತೃತ್ವದಲ್ಲಿ ಆಶ್ವಮೇಧ ಯಾಗದ ಕುದುರೆಯನ್ನು ಭೂಮಂಡಳದ ಎಲ್ಲಾ ರಾಜರುಗಳ ರಾಜಧಾನಿಗೆ ಈ ಆಶ್ವಮೇದ ಯಾಗದ ಕುದುರೆಯನ್ನು ತೆಗೆದುಕೊಂಡು ಹೋಗುತ್ತಾನೆ. ಎಲ್ಲಾ ರಾಜರುಗಳು ಕಪ್ಪ ಕಾಣಿಕೆಯನ್ನು ಕೊಟ್ಟು ಮುಂದೆ ಕಳುಹಿಸುತ್ತಾರೆ.

ಆ ಕುದುರೆ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೂ ಹೋಗುತ್ತದೆ. ಲವ ಕುಶರು ಈ ಕುದುರೆಯನ್ನು ಕಟ್ಟಿ ಹಾಕುತ್ತಾರೆ. ಶತ್ರುಘ್ನ ಕುದುರೆಯನ್ನು ಬಿಡುವಂತೆ ಲವಕುಶರಿಗೆ ತಿಳಿಸುತ್ತಾನೆ. ಲವ ಕುಶರು ಕುದುರೆಯನ್ನು ಬಿಡಲು ಒಪ್ಪುವುದಿಲ್ಲ ಶತ್ರುಘ್ನ ಬಲಿಷ್ಟವಾದ ಸೈನ್ಯದೊಡನೆ ಲವಕುಶರೊಂದಿಗೆ ಯುದ್ಧಮಾಡಿ ಸೋತು ಹೋಗುತ್ತಾನೆ. ಈ ವಿಷಯ ತಿಳಿದ ಶ್ರೀ ರಾಮನು ಲವಕುಶರೊಂದಿಗೆ ಯುದ್ಧಮಾಡಲು ಬರುತ್ತಾನೆ. ಆಗ ವಾಲ್ಮೀಕಿ ಮಹರ್ಷಿಗಳು ಶ್ರೀ ರಾಮನಿಗೆ ಲವಕುಶರು ನಿನ್ನ ಮಕ್ಕಳು ಎಂದು ಹೇಳಿ ಸೀತೆ ಮತ್ತು ಲವಕುಶರನ್ನು ಶ್ರೀ ರಾಮನಿಗೆ ಒಪ್ಪಿಸುತ್ತಾರೆ. ಶ್ರೀ ರಾಮನು ಸೀತೆ ಮತ್ತು ಲವ ಕುಶರನ್ನು ಕರೆದು ಕೊಂಡು ಹೋಗಿ ಅಯೋಧ್ಯೆಯಲ್ಲಿ ಆಶ್ವಮೇದ ಯಜ್ಞವನ್ನು ಮುಗಿಸಿ ದರ್ಮದಿಂದ ರಾಜ್ಯಬಾರ ಮಾಡುತ್ತಾನೆ.

ಓಂ. ಸ್ವಸ್ತಿ

ಮಂಗಳಂ ಕೋಸಲೇಂದ್ರಾಯ । ಮಹನೀಯ ಗುಣಾತ್ಮನೇ ॥ ಚಕ್ರವರ್ತಿ
ತನುಜಾಯ ಸಾರ್ವಭೌಮಾಯ ಮಂಗಳಂ

ಸರ್ವೇ ಜನಾ: ಸುಖಿನೋ ಭವಂತು ।
ಸಮಸ್ತ ಸನ್ಮಂಗಲಾನಿ ಭವಂತು॥
ದರ್ಮೋ ರಕ್ಷತಿ: ರಕ್ಷಿತ:

CC-O. In Public Domain. Digitized by eGangotri

ಕಲ್ಲಿನಲ್ಲಿ ಕೆತ್ತಿದನು ಶಿಲ್ಪಿ ಅವ ಶಿವನಾ
ದೇಗುಲದಿ ಕೂಡಿದರು ವೈದಿಕರು ಅವನಾ
ಇರುವಂದು ದೈವಕ್ಕೆ ನೂರಾರು ಹೆಸರಿಟ್ಟು
ಅವ ಹೆಚ್ಚು ಇವ ಹೆಚ್ಚು ಎನ್ನುತ್ತಾ ಬೊಬ್ಬಿಟ್ಟು
ಹಾರುವನು ಬಂದಾಗ ಜನಿವಾರ ವಿತ್ತೆ
ಶಿವ ಭಕ್ತ ಬಂದಾಗ ಶಿವದಾರ ವಿತ್ತೆ
ಬರುವಾಗ ಎಲ್ಲರೂ ಬತ್ತಲೆಯಲಿ ಬಂದು
ಆಮೇಲೆ ಕಿತ್ತಾಟ ಮೇಲು ಕೀಳೆಂದು
ಮೇಲೆಂಭ ಮಾನವರ ಮೇಲೇಕೆ ಸಿಟ್ಟು
ಶಿವನಾಗ ಹೊರಟಾನು ಅವರ ಮನಬಿಟ್ಟು

****

ಯಂ ವೈದಿಕಾ ಮಂತ್ರದೃಶ: ಪುರಾಣಾ
ಇಂದ್ರಯಮಂ ಮಾತಾರಿಶ್ವಾನ ಮಾಹು:
ವೇದಾಂತಿನೋ ನಿರ್ವಚನೀಯ ಮೇಕಂ
ಯಂ ಬ್ರಹ್ಮ ಶಬ್ದೇನ ವಿನಿರ್ದಿಶಂತಿ
ಶೈವಾಯಮೀಶಂ ಶಿವ ಇತ್ಯವೋಚನ್
ಯಂ ವೈಷ್ಣವಾ ವಿಷ್ಣುರಿತಿಸ್ತುವಂತಿ
ಬುದ್ಧ ಸ್ತತಾರ್ಹನೀತಿ ಬೌದ್ಧ ಜೈನಾ
ಸಶ್ರೀ ಅಖಾಲೆತಿಚ ನಿಖ್ಖಿಸಂತ:
ಶಾಸ್ತೆತಿ ಕೇಚಿತ್ ಕತಿಚಿತ್ ಕುಮಾರ:
ಸ್ವಾಮಿ ಮಾತೇತಿ ಪಿತೇತಿ ಭಕ್ತ್ಯಾ
ಯಂಪ್ರಾರ್ಥಯಂತೆ ಜಗದೀಶತಾರಂ
ಸರ್ವ ಏವ ಪ್ರಭುರ ದ್ವಿತೀಯ:

Sri Vidyabharathi Book Centre, Sringeri

CC-0. In Public Domain. Digitized by eGangotri

ಸಾಮೂಹಿಕ ಪ್ರಾರ್ಥನೆ ಮತ್ತು ಅರ್ಥಗಳು

ಸ್ವಸ್ತಿ ಪ್ರಜಾಭ್ಯ: ಪರಿಪಾಲಯಂತಾಂ । ನ್ಯಾಯೇನ ಮಾರ್ಗೇಣ ಮಹಿಂ ಮಹೀಶಾ: ॥
ಗೋಸ್ಸಜ್ಜನೇಭ್ಯ: ಶುಭಮಸ್ತು ನಿತ್ಯಂ । ಲೋಕಾ: ಸಮಸ್ತಾ: ಸುಖಿನೋ ಭವಂತು ॥

ಪ್ರಪಂಚದಲ್ಲಿರುವ ಎಲ್ಲಾ ಜನಗಳಿಗೆ ಮಂಗಳವಾಗಲಿ, ದೇಶವನ್ನು ಆಳತಕ್ಕ ಅಧಿಕಾರಿಗಳು ನ್ಯಾಯಮಾರ್ಗದಿಂದ ಭೂಮಿಯನ್ನು ಆಳಲಿ(ಮಾನವ ಜಾತಿಯ ಬದುಕಿಗೆ ಅವಶ್ಯಕವಾದ) ಹಸುಗಳ ಜಾತಿಗೂ ಸಮಾಜದ ಹಿತವನ್ನು ಬಯಸುವ ಸತ್ಪುರುಷರಿಗೂ ಯಾವಾಗಲೂ ಮಂಗಳವಾಗಲಿ ಎಲ್ಲಾ ಜನಗಳೂ ಸುಖಿವುಳ್ಳವರಾಗಲಿ.

ಕಾಲೇವರ್ಷತು ಪರ್ಜನ್ಯ: । ಪೃಥಿವೀಸಸ್ಯಶಾಲಿನಿ ॥
ದೇಶೋಯಂ ಕ್ಷೋಭ: ರಹಿತ ॥ ಸಜ್ಜನಾ:ಸ್ಸಂತುನಿರ್ಭಯಾ ॥

ಪ್ರಪಂಚಕ್ಕೆ ಅವಶ್ಯಕವಿದ್ದಾಗ ಮೋಡಗಳು ಮಳೆಯನ್ನು ಸುರಿಸಲಿ ಭೂಮಿಯು ಯಾವಾಗಲೂ ಸಸ್ಯಗಳಿಂದ ಹಸಿರಾಗಲಿ, ಈ ದೇಶವು ಯಾವಾಗಲೂ ಶಾಂತಿಯಿಂದ ಕೂಡಿರಲಿ, ಸಾಧುಗಳು ಮತ್ತು ಪ್ರಪಂಚದ ಕಲ್ಯಾಣವನ್ನು ಬಯಸುವ ಜನಗಳು ಧೈರ್ಯದಿಂದ (ಸಂತೋಷದಿಂದ) ಬಾಳುವಂತಾಗಲಿ

ಅಪುತ್ರಾ: ಪುತ್ರಿಣ:ಸ್ಸಂತು। ಪುತ್ರಿಣ: ಸ್ಸಂತು ಪೌತ್ರಿಣ: ॥
ಅಧನಾ: ಸಧನಾ: ಸ್ಸಂತು । ಜೀವಂತುಶ್ಯರದ:ಸ್ಯತಂ: ॥

ಮಕ್ಕಳಿಲ್ಲದವರಿಗೆ ಮಕ್ಕಳಾಗಲಿ, ಮಕ್ಕಳಿದ್ದವರು ಮೊಮ್ಮಕ್ಕಳುಳ್ಳವರಾಗಲಿ, ಹಣವಿಲ್ಲದವರು ಹಣವಂತರಾಗಲಿ, ಎಲ್ಲಾ ಜನಗಳು ನೂರು ವರ್ಷ ಸುಖದಿಂದ ಬಾಳಲಿ.

ಕಾಯೇನ ವಾಚಾ ಮನಸೇಂದ್ರಿಯೈರ್ವಾ । ಬುದ್ಧ್ಯಾತ್ಮನಾವ ಪ್ರಕೃತೇ ಸ್ವಭಾವತ್ ॥
ಕರೋಮಿ ಯದ್ಯತ್ಸ್ಸಕಲಂಪರಸ್ಮೈ । ನಾರಾಯಣಾಯೇತಿ ಸಮರ್ಪಯಾಮಿ॥

ಶರೀರದಿಂದಾಗಲಿ ಮಾತುಗಳಿಂದಾಗಲಿ ಮನಸ್ಸಿನಿಂದಾಗಲಿ ಬುದ್ಧಿಯಿಂದಾಗಲಿ ನಮ್ಮಲ್ಲಿರುವ ಚೈತನ್ಯದಿಂದಾಗಲಿ ಪ್ರಕೃತಿಜನ್ಯ ಸ್ವಭಾವದಿಂದಾಗಲಿ ಯಾವ ಒಳ್ಳೆಯ ಮತ್ತು ಕೆಟ್ಟ ಕೆಲಸಗಳನ್ನು ಮಾಡಿದ್ದೆನೆಯೋ ಅವೆಲ್ಲವನ್ನು ಸಮಸ್ತ ಪ್ರಪಂಚದ ವ್ಯವಹಾರಗಳಿಗೂ ಕಾರಣವಾದ ಅಗೋಚರನಾದ ನಾರಾಯಣನೇ ನಿನಗೆ (ನನ್ನ ಇಷ್ಟ ದೇವತೆಗೆ) ಸಮರ್ಪಿಸಿತ್ತೇನೆ.

ಮಂಗಳಂ ಕೋಸಲೇಂದ್ರಾಯ । ಮಹನಿಯನೇ ಗುಣಾತ್ಮನೇ ॥
ಚಕ್ರವರ್ತಿ ತನೂಜಾಯ ಸಾರ್ವಭೌಮಯ ಮಂಗಳಂ

ಕೋಸಲ ದೇಶದ ರಾಜನಾದ ಶ್ರೇಷ್ಠನಾದ ಗುಣಗಳಿಂದ ಕೂಡಿದ ಧಶರಥ ಚಕ್ರವರ್ತಿಯ ಮಗನಾದ ಸಾರ್ವಭೌಮನಾದ ಶ್ರೀ ರಾಮಚಂದ್ರನಿಗೆ ಮಂಗಳವು.

ಸರ್ವೇಜನಾ: ಸುಖಿನೋಭವಂತು । ಸಮಸ್ತ ಸನ್ಮಂಗಲಾನಿ ಭವಂತು॥

ಎಲ್ಲಾ ಜನಗಳೂ ಸುಖಿಗಳಾಗಲಿ ಎಲ್ಲವು ಮಂಗಳವುಳ್ಳದ್ದಾಗಲಿ

ಧರ್ಮೋ ರಕ್ಷಿತಿ ರಕ್ಷತ:

ಅಸತೋಮ ಸದ್ಗಮಯ ತಮಸೋಮ ಜ್ಯೋತಿರ್ಗಮಯ ಮೃತ್ಯೋರ್ಮಾಂ ಮರ್ಮುತಂಗಮಯ

Sri Vidyabharathi Book Centre, Sirsi